ಐಕ್ಯರಂಗ

(ವಾರ ಪತ್ರಿಕೆ)

ಭಾರತ ಕಮ್ಯುನಿಸ್ಟ್ ಪಕ್ಷ[ಮಾರ್ಕ್ಸ್‌ವಾದಿ]ಕರ್ನಾಟಕ ರಾಜ್ಯ ಸಮಿತಿಯ ಮುಖಪತ್ರಿಕೆ

ಸಂಪುಟ 5 | ಸಂಚಿಕೆ 20 | ಮೇ 15, 1983 | ಬೆಲೆ 60 ಪೈಸೆ

ಓದುಗರ ಗಮನಕ್ಕೆ

'ಐಕ್ಯರಂಗ' ಮೇ ವಿಶೇಷಾಂಕ ಇದೇ ತಿಂಗಳ 29 ರಂದು ಪ್ರಕಟವಾಗಲಿದೆ. ನಮ್ಮ ಮುಂದಿನ ಸಂಚಿಕೆ (22-5-83) ಯು ಪ್ರಕಟವಾಗುವುದಿಲ್ಲ.

ಮೇ ವಿಶೇಷಾಂಕವು ರಾಜಕೀಯ, ಸಾಮಾಜಿಕ, ಆರ್ಥಿಕ, ಸಾಹಿತ್ಯಿಕ ಅಂಶಗಳ ಕುರಿತಾದ ಲೇಖನಗಳನ್ನೊಳಗೊಂಡಿದ್ದು, ಸುಮಾರು 32 ಪುಟಗಳನ್ನು ಹೊಂದಿರುತ್ತದೆ.

ವಿಶೇಷಾಂಕದ ಬೆಲೆ ಒಂದು ರೂಪಾಯಿ.

ಹೆಚ್ಚಿನ ಪ್ರತಿಗಳು ಬೇಕಿದ್ದಲ್ಲಿ ಏಜೆನ್ಸಿದಾರರಾಗಲೀ ಅಥವ ಓದುಗರಾಗಲೀ ನಮಗೆ ಕೂಡಲೇ ತಿಳಿಸಬೇಕಾಗಿ ಕೋರುತ್ತೇವೆ,

ವ್ಯವಸ್ಥಾಪಕ,
ಐಕ್ಯರಂಗ

ಕರ್ನಾಟಕ ರಾಜ್ಯದಲ್ಲಿ :

ಅಸಮರ್ಪಕ ಪರಿಹಾರ ಕಾರ್ಯ - ಅದಕ್ಕೆ ಕಾರಣಗಳು

ಕಳೆದ ಮೂವತ್ತೈದು ವರ್ಷಗಳಿಂದಲೂ, ದೇಶಕ್ಕೆ ಸ್ವಾತಂತ್ರ್ಯ ಸಿಕ್ಕಿದಂದಿನಿಂದಲೂ ಆಳುತ್ತಾ ಬಂದಿರುವ ಕಾಂಗ್ರೆಸ್ ಪಕ್ಷ ಬಂಡವಾಳದಾರ ಭೂಮಾಲಿಕ ಪರ ನೀತಿಯನ್ನನುಸರಿಸುತ್ತಾ ಬಂದಿರುವುದರಿಂದ ಇಡೀ ಭಾರತ ದೇಶ ಹಾಗೆಯೇ ರಾಜ್ಯಗಳು ಸತತವಾಗಿ ಒಂದಲ್ಲೊಂದು ಭೀಕರ ಸಮಸ್ಯೆಗಳನ್ನೆದುರಿಸುತ್ತಲೇ ಬರಬೇಕಾಗಿ ಬಂದಿದೆ. ಪ.ಬಂಗಾಲದ ವಿದ್ಯುಚ್ಛಕ್ತಿ ಸಮಸ್ಯೆಯಾಗಲಿ, ಕರ್ನಾಟಕ, ಮಹಾರಾಷ್ಟ್ರ ರಾಜಾಸ್ಥಾನಗಳು ಎದುರಿಸುತ್ತಿರುವ ಬರಗಾಲ ಪರಿಸ್ಥಿತಿಯಾಗಲಿ, ಮದ್ರಾಸಿನಂತ ಕುಡಿಯುವ ನೀರಿನ ಸಮಸ್ಯೆಯಾಗಲಿ, ಇವುಗಳೆಲ್ಲ ಕಾಂಗ್ರೆಸ್ ಅನುಸರಿಸುತ್ತ ಬಂದಿರುವ ಆರ್ಥಿಕ–ರಾಜಕೀಯ ನೀತಿಯ ಪ್ರತಿಫಲವಾಗಿದೆ ಕೆಲವು ರಾಜ್ಯಗಳಲ್ಲಿ ವಿರೋಧ ಪಕ್ಷಗಳು ಅಧಿಕಾರಕ್ಕೆ ಬಂದಿದ್ದರೂ ಕೂಡ 1947ರಿಂದಲೂ ಅನುಸರಿಸುತ್ತ ಬಂದ ತಪ್ಪು ಧೋರಣೆಗಳನ್ನು ತೆಗೆದು ಹಾಕಲು ವಿಳಂಬವಾಗುತ್ತಿದೆ. ಕಾಂಗ್ರೆಸ್ ಆಳ್ವಿಕೆಯ ಪರಂಪರೆಯಲ್ಲೇ ಆಡಳಿತ ನಡೆಸಿಕೊಂಡು ಬಂದಂಥ ಅಧಿಕಾರಿಗಳೂ, ನೌಕರಶಾಹಿ ವರ್ಗವೂ ವಿರೋಧ ಪಕ್ಷಗಳ ಸರ್ಕಾರ ಅಧಿಕಾರಕ್ಕೆ ಬಂದಲ್ಲಿ ಕೂಡ ತಮ್ಮಲ್ಲಿ ರಕ್ತಗತವಾಗಿರುವ ಕಾಂಗ್ರೆಸ್ ಆಡಳಿತೆಯ ಪರಂಪರೆಗಳಾದ ಅದಕ್ಷತೆ, ಪಕ್ಷಪಾತಿತನ, ಭ್ರಷ್ಟಾಚಾರಗಳಂಥ ದುರ್ಗುಣಗಳನ್ನು ಬಿಟ್ಟುಬಿಡಲು, ತಮ್ಮನ್ನು ತಾವೇ ಸುಧಾರಿಸಿಕೊಳ್ಳುವ ಪ್ರಯತ್ನ ಮಾಡದಿರುವುದರಿಂದಲೂ, ಪ್ರಯತ್ನ ಮಾಡಿದರೂ ಕೂಡ ಮೂಲಭೂತ ಬದಲಾವಣೆಗೆ ಕಾಲಾವಕಾಶ ಬೇಕಾಗಿರುವುದರಿಂದ ಆಡಳಿತೆಯಲ್ಲಿ ಕ್ರಾಂತಿಕಾರಿ ಬದಲಾವಣೆ ತರುವಲ್ಲಿ ವಿಳಂಬವಾಗುತ್ತದೆ. ಕೆಲವು ಅಧಿಕಾರಿಗಳು, ನೌಕರದಾರರೂ, ಪಟ್ಟಭದ್ರ ಹಿತಾಸಕ್ತಿಗಳಲ್ಲೇ ಅಂಟಿಕೊಂಡಿರುವುದರಿಂದ, ತಮಗೆ ಒಗ್ಗದ ಸರ್ಕಾರ ಅಧಿಕಾರಕ್ಕೆ ಬಂದರೆ ಆ ಸರ್ಕಾರದ ಯೋಜನೆಗಳನ್ನು, ಕಾರ್ಯಕ್ರಮಗಳನ್ನೂ ವಿಫಲಗೊಳಿಸುವುದರಲ್ಲೇ ತಲ್ಲೀನರಾಗಿರುತ್ತಾರೆಂಬ ಸಂಗತಿ ಎಲ್ಲರಿಗೂ ಗೊತ್ತು.

ಈ ಹಿನ್ನೆಲೆಯಲ್ಲಿ ಕರ್ನಾಟಕದ ಬಹುಭಾಗ ಯಾವಾಗಲೂ ಎದುರಿಸುತ್ತ ಬಂದಿರುವ ಬರಗಾಲ ಪರಿಸ್ಥಿತಿಗೂ ಕುಡಿಯುವ ನೀರಿನ ಸಮಸ್ಯೆಗೂ, ಸಕಾಲದಲ್ಲಿ ಪರಿಹಾರ ಒದಗಿಸುವುದರಲ್ಲಿ ಜನತಾ ಸರ್ಕಾರ ವಿಫಲಗೊಂಡಿದೆಯೆಂದು ರಾಜಕೀಯ ದುರುದ್ದೇಶದಿಂದಲೇ ಟೀಕಿಸುತ್ತಿರುವ ಕಾಂಗ್ರೆ ಮುಖಂಡ ವೀರಪ್ಪ ಮೊಯ್ಲಿಯಂಥವರ ವಾದವನ್ನು ನಾವು ಬೆಂಬಲಿಸುವುದಿಲ್ಲ.

ನಮ್ಮ ರಾಜ್ಯ ಎದುರಿಸುತ್ತಿರುವ ಬರಗಾಲ, ನೀರಿನ ಸಮಸ್ಯೆಗಳ ಪರಿಹಾರಕ್ಕೆ ರೂ. 75 ಕೋಟಿ ಬೇಕೆಂಬ ಬೇಡಿಕೆಯನ್ನು ಹೆಗ್ಡೆ ಸರ್ಕಾರ ಕೇಂದ್ರವನ್ನು ಕೋರಿದೆ. ಕೇಂದ್ರ ಬರೇ ರೂ. 10 ಕೋಟಿ ಮಂಜೂರು ಮಾಡಿದೆ. ಪಂಚಾಯತ್ ಮಂತ್ರಿ ನಜೀರ್ ಸಾಹೇಬರ ಹೇಳಿಕೆಯಂತೆ, ಈಗಾಗಲೇ ರಾಜ್ಯ ಸರ್ಕಾರ ರೂ. 35 ಕೋಟಿ ಪರಿಹಾರ ಕಾಮಗಾರಿಗಳಿಗೆ, ಕೊಳವೆ ಭಾವಿಗಳಿಗೆ ಖರ್ಚುಮಾಡಿದೆ. ಆದರೆ ಹೆಚ್ಚಿನ ಪ್ರದೇಶಗಳಲ್ಲಿ ರೂ. 45 ಕೋಟಿ ಖರ್ಚಿನಿಂದ ಕೈಗೊಂಡ ಪರಿಹಾರ ಕಾರ್ಯಗಳ ಪ್ರತಿಫಲ ಜನರಿಗೆ ದಕ್ಕುತ್ತಿಲ್ಲೆಂದು ಬಹಳ ಜನರ ವಾದ. ಈ ವಾದಕ್ಕೆ ಕಾರಣಗಳೂ ಇವೆ.

ಕರ್ನಾಟಕ ರಾಜ್ಯದ ಬಹುಭಾಗ ಸದಾಕಾಲ ಎದುರಿಸುತ್ತಿರುವ ಬರಗಾಲದಂಥ ಸಮಸ್ಯೆಗಳನ್ನು ಅಭ್ಯಾಸಮಾಡಿ ಅವುಗಳಿಗೆ ಶಾಶ್ವತ ಪರಿಹಾರ ಕಂಡುಹಿಡಿದು, ಯೋಜಿತ ರೀತಿಯಲ್ಲಿ ಪರಿಹಾರ ಕಾರ್ಯಗಳನ್ನು ಕೈಗೊಳ್ಳಬೇಕೆಂದು ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಾರ್ಟಿ ಕರ್ನಾಟಕ ಪ್ರಾಂತ ರೈತ ಸಂಘಗಳು ಸರ್ಕಾರವನ್ನು ಕೇಳಿಕೊಳ್ಳುತ್ತ ಬಂದಿವೆ. ಬರಗಾಲ ಬಿದ್ದಾಗಲೆಲ್ಲಾ ಕೇಂದ್ರ ಸರ್ಕಾರ ಅಧಿಕಾರಿಗಳನ್ನು ಕಳುಹಿಸುತ್ತಿತ್ತು. ಅವರ ವರದಿಯನ್ನಾಧರಿಸಿ ಅಲ್ಪ-ಸ್ವಲ್ಪ ಪರಿಹಾರ ಧನ ಸಹಾಯ ಮಾಡುತ್ತಿತ್ತು. ರಾಜ್ಯ ಸರ್ಕಾರ ಕೂಡ ತನ್ನ ಬೊಕ್ಕಸದಿಂದ ಸ್ವಲ್ಪ ಹಣ ಖರ್ಚು ಮಾಡಬೇಕಾಗುತ್ತಿತ್ತು, ಆದರೆ ಮಳೆ ಪ್ರಾರಂಭವಾದ ಕೂಡಲೇ ಕೇಂದ್ರ-ರಾಜ್ಯಗಳು ಭರದಿಂದ ಕೈಗೊಂಡ ಪರಿಹಾರ ಕಾಮಗಾರಿಗಳೆಲ್ಲ ಮಳೆ ನೀರಿನಲ್ಲಿ ಕೊಚ್ಚಿಕೊಂಡು ಹೋಗುತ್ತಿದ್ದವು ಮುಂದಿನ ಬೇಸಿಗೆಯಲ್ಲಿ ಮತ್ತೆ ಪರಿಹಾರಕ್ಕಾಗಿ ಶೋಧನೆ ಮತ್ತೆ ಪರಿಹಾರ ಕಾರ್ಯ, ಮತ್ತೊಮ್ಮೆ ಮಳೆಗೆ ಆಹುತಿ ಜನರ ಸಮಸ್ಯೆಗಳಿಗೆ ಪರಿಹಾರ ಒದಗಿಸುವ ಬಂಡವಾಳಶಾಹಿ ಸರ್ಕಾರದ ನೀತಿ ಇದಾಗಿದೆ. ಈ ನೀತಿಯಲ್ಲಿ ಬದಲಾವಣೆಯಾಗುವುದು ಅತ್ಯಗತ್ಯ.

ಇಷ್ಟು ವರ್ಷಗಳಲ್ಲಿ ರಾಜ್ಯಕ್ಕೆ ಸಂದರ್ಶನವಿತ್ತ ಕೇಂದ್ರದ ವೀಕ್ಷಣಾ ಸಮಿತಿ ವರದಿಗಳಾಗಲಿ, ಅಥವಾ ಜನತಾ ಸರಕಾರದ ಕೋರಿಕೆಯಂತೆ ಎರಡು ತಿಂಗಳ ಹಿಂದೆ ರಾಜ್ಯಕ್ಕೆ ಬಂದು ತಿರುಗಾಡಿ ಪರಿಸ್ಥಿತಿ ಅಭ್ಯಾಸ ಮಾಡಿದ ಕೇಂದ್ರದ ತಂಡ ಯಾವ ನಿರ್ಧಾರಕ್ಕೆ ಬಂದಿದೆ, ಏನು ಶಿಫಾರಸು ಮಾಡಿದೆ ಎಂಬ ವಿಷಯ ಸಾರ್ವಜನಿಕರಿಂದ ಮುಚ್ಚಿಡಲಾಗಿದೆ. ರಾಜ್ಯ ಸರ್ಕಾರಕ್ಕಾದರೂ ಕೇಂದ್ರದಿಂದ ವರದಿಗಳ ಪ್ರತಿ ಬಂದಿದೆಯೋ ಇಲ್ಲವೋ ತಿಳಿದಿಲ್ಲ. ಕೇಂದ್ರ ಸರ್ಕಾರದ ಸಹಾಯಕ್ಕಾಗಿ ಕೇಂದ್ರದ ವೀಕ್ಷಕರ ವರದಿಬೇಕು. ಅದರ ಜೊತೆ

(ಎಂಟನೇ ಪುಟ ನೋಡಿ)

ಮಾರ್ಕ್ಸ್‌ವಾದೀ ಕಮ್ಯೂನಿಸ್ಟ್ ಪಾರ್ಟಿಯ ದ. ಕನ್ನಡ ಜಿಲ್ಲಾ ಕಮಿಟಿಯವರು, ಅಕ್ಕಿಯ ಬೆಲೆ ಏರಿಕೆ ಮತ್ತು ನೀರಿನ ಸಮಸ್ಯೆಗಳ ಪರಿಹಾರಕ್ಕಾಗಿ, ದ.ಕ. ಜಿಲ್ಲೆಯಾದ್ಯಂತ ದಿನಾಂಕ 17–5–83 ರಂದು ಎಲ್ಲಾ ತಾಲ್ಲೂಕು ಕಛೇರಿಗಳ ಮತ್ತು ಮಂಗಳೂರಿನ ಜಿಲ್ಲಾ ಕಛೇರಿ ಎದುರು ಮುತ ಪ್ರದರ್ಶನವನ್ನು ಏರ್ಪಡಿಸಿರುತ್ತಾರೆ.

ಆದ್ದರಿಂದ ಸಾರ್ವಜನಿಕರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ ಪ್ರದರ್ಶನವನ್ನು ಯಶಸ್ವಿ ಮಾಡಬೇಕೆಂದು ದ. ಕ. ಜಿಲ್ಲಾ ಕಮಿಟಿ ಕೋರಿದೆ.

ಸಂಪಾದಕೀಯ :

ಬಿ. ಜೆ. ಪಿ. ಯ ಅಕ್ಕಿ ಗೇಟು

ಬಿ. ಜೆ. ಪಿ. ಯವರು ಕರ್ನಾಟಕ–ಕೇರಳ ಗಡಿಯಾದ ತಳಪಾಡಿಯಿಂದ ಮೂರು ಮೈಲಿ ಒಳಗಿರುವ ದ. ಕ. ಜಿಲ್ಲೆಯ ತುಕ್ಕೊಟ್ಟಿನಲ್ಲಿ ತಮ್ಮ ಸ್ವಯಂಸೇವಕರನ್ನು ನಿಲ್ಲಿಸಿ ಕೇರಳಕ್ಕೆ ಹೋಗುವ ಲಾರಿಗಳನ್ನು ನಿಲ್ಲಿಸಿ, ಅಕ್ಕಿ ಸಾಗಾಣಿಕೆಯಾಗುವ ಲಾರಿಗಳಿದ್ದರೆ ಅವುಗಳನ್ನು ತಡೆದು ಅದರಲ್ಲಿದ್ದ ಅಕ್ಕಿಯನ್ನು ಒಂದು ಕೆಜಿಗೆ ರೂ. 2-90 ರಂತೆ ಮಾರಾಟ ಮಾಡಿದ್ದಾರೆ ಎಂಬ ಸುದ್ದಿ ಬಂಡವಾಳಶಾಹಿ ಪತ್ರಿಕೆಗಳಲ್ಲಿ ಹೆಚ್ಚು ಪ್ರಚಾರ ಪಡೆದಿದೆ.

ಮಂಗಳೂರಿನಿಂದ ಕೇರಳಕ್ಕೆ ಅಕ್ಕಿ ಸಾಗಾಣಿಕೆಯಾಗುತ್ತದೆಂಬ ಸಂಗತಿ ಎಲ್ಲರಿಗೂ ಗೊತ್ತು. ತಳಪಾಡಿಯಲ್ಲಿ ಸರ್ಕಾರದ ಗೇಟಿದೆ. ಪೋಲೀಸರು ಅಕ್ಕಿಸಾಗಾಣಿಕೆಯನ್ನು ತಡೆಯಬೇಕು, ಆದರೆ ಅಕ್ಕಿ ವ್ಯಾಪಾರಸ್ಥರ-ಪೋಲೀಸರ ಒಳ ಸಂಚಿನಿಂದಾಗಿ ಅಕ್ಕಿಯ ಕಳ್ಳಸಾಗಾಣಿಕೆ ನಡೆಯುತ್ತಲೇ ಇದೆ.

ಮಂಗಳೂರಿನಲ್ಲಿ ಅಕ್ಕಿಯ ಬೆಲೆ ಕೆ.ಜಿ.ಗೆ ರೂ. 4 ಆಗಬೇಕಾಗಿದ್ದರೆ ಇಂಥ ಕಳ್ಳಸಾಗಾಣಿಕೆ ಹಾಗೆಯೇ ವ್ಯಾಪಾರಸ್ಥರೇ ಮುಖ್ಯ ಕಾರಣ. ಜನತಾ ಸರ್ಕಾರ ರೇಷನ್ ಅಂಗಡಿಗಳಿಗೆ ಸಾಕಷ್ಟು ಅಕ್ಕಿ ಪೂರೈಸಬೇಕಾಗಿತ್ತು. ಅದು ಸರಿಯಾಗಿ ಒದಗಿಸಲ್ಪಡುತ್ತಿಲ್ಲ. ಇದರ ದುರುಪಯೋಗ ಮಾಡಿಕೊಂಡು ವ್ಯಾಪಾರಸ್ಥರು ಅಕ್ಕಿಯ ಬೆಲೆ ಹೆಚ್ಚಿಸಿದ್ದಾರೆ.

ಅವಕಾಶ ಸಿಕ್ಕಿದಾಗೆಲ್ಲ ಅತ್ಯಾವಶ್ಯಕ ವಸ್ತುಗಳ ಬೆಲೆ ಹೆಚ್ಚಿಸುವ, ಅಕ್ಕಿಯನ್ನು ಬಚ್ಚಿಟ್ಟು ಜನರು ಉಪವಾಸ ಬೀಳುವಂತೆ ಮಾಡುವ ಈ ಸಮಾಜದ್ರೋಹಿಗಳೆಲ್ಲ ಬಿ. ಜೆ. ಪಿ.ಯ ಬೆನ್ನೆಲುಬಾಗಿದ್ದಾರೆ. ಒಂದೆಡೆ ಆಹಾರ ಧಾನ್ಯ ಬಚ್ಚಿಟ್ಟು, ಬೆಲೆ ಹೆಚ್ಚಿಸುವುದು; ಮತ್ತೊಂದೆಡೆ ಬೆಲೆ ಹೆಚ್ಚಾಗಿದೆಯೆಂದು ಬೊಬ್ಬಿಡುವುದು ಇದೇ ಜನ. ಕೇರಳಕ್ಕೆ ಪೋಲೀಸರ ಸಹಾಯದಿಂದ ಅಕ್ಕಿಸಾಗಾಣಿಕೆ ಮಾಡುವವರೂ ಈ ಮಹಾಶಯರೇ.

ತೊಕ್ಕೊಟ್ಟಿನಲ್ಲಿ ಅಕ್ಕಿ ಗೇಟು ಹಾಕಿದವರೂ ಇವರೇ, ಬಂದರದಿಂದ ಲಾರಿಯಲ್ಲಿ ಅಕ್ಕಿ ತುಂಬಿಸಿ ಕಳುಹಿಸಿದವರೂ ಇವರೇ. ಆ ಲಾರಿಯನ್ನು ಹಿಡಿದು ಕೆ.ಜಿ.ಗೆ 2–90ರಂತೆ ಅಕ್ಕಿ ಮಾರಾಟ ಮಾಡಿದವರೂ ಇವರೇ.

ಬಹಳ ತಲೆ ಖರ್ಚು ಮಾಡಿ ತಯಾರಿಸಿದ ನಾಟಕ. ಈ ನಾಟಕ ಮೂರು ದಿವಸ ನಡೆಯಿತು. ದ. ಕ. ಜಿಲ್ಲೆಯ ಮಾರ್ಕ್ಸ್‌ವಾದಿ ಕಮ್ಯೂನಿಸ್ಟ್ ಪಾರ್ಟಿ, ಬಿ. ಜೆ. ಪಿ.ಯ ಈ ರಾಜಕೀಯ ನಾಟಕದ ಒಳಗುಟ್ಟನ್ನು ಅರಿತು, ಧೈರ್ಯದಿಂದ ಅದನ್ನು ಬಯಲಿಗೆಳೆಯಿತು.

ಜನತಾ ಸರ್ಕಾರ ಸಾಕಷ್ಟು ಅಕ್ಕಿ ಪೂರೈಸದಿರುವುದು ತಪ್ಪು; ಅದರ ಬೇಜವಾಬ್ದಾರಿಯನ್ನು ತೋರಿಸುತ್ತದೆ. ಸರಕಾರ ಸಾಕಷ್ಟು ಅಕ್ಕಿ ಪೂರೈಸಬೇಕೆಂದು ಹೋರಾಡಲೇಬೇಕು. ಅದೇ ಸಮಯದಲ್ಲಿ ವ್ಯಾಪಾರಸ್ಥರು ಬೆಲೆ ಹೆಚ್ಚಿಸುವುದನ್ನೂ, ಕಳ್ಳಸಾಗಾಣಿಕೆ ಮಾಡು

(ಎಂಟನೇ ಪುಟ ನೋಡಿ)

"ಜಾತಾ ಸಂದರ್ಭದಲ್ಲಿನ" ಅನಿಸಿಕೆಗಳು - ಅನುಭವಗಳು

—ಎಂ. ಕೆ. ಭಟ್

ಹಳ್ಳಿಯಲ್ಲಿ ಹುಟ್ಟಿ ಬೆಳೆದ ನನಗೆ ವಿದ್ಯಾಭ್ಯಾಸಕ್ಕಾಗಿ ಭಾರತ ದೇಶದಲ್ಲಿ ಮೈಸೂರಿನಲ್ಲೂ, ಬೊಂಬಾಯಿಯಲ್ಲೂ ಹಾಗೂ ಅಮೇರಿಕಾ ಸಂಯುಕ್ತ ಸಂಸ್ಥಾನದ ನ್ಯೂಯಾರ್ಕ್ ನಗರದಲ್ಲೂ ಇದ್ದಾಗಲೂ ಹಳ್ಳಿಯ ಜೀವನದತ್ತ ಒಲವಿತ್ತು. ಅಮೇರಿಕಾದಿಂದ ವಾಪಸಾದ ಮೇಲೆ ಹಳ್ಳಿಯ ಬಡಜನರನ್ನು ಸಂಘಟಿಸುವುದರೊಂದಿಗೆ ರಾಜಕೀಯ ಜೀವನದ ಪ್ರಾರಂಭವಾಯಿತು. ಪಾರ್ಟಿಯ ಕೆಲಸಕ್ಕಾಗಿ ಮತ್ತೆ ಬೆಂಗಳೂರಿಗೆ ಬಂದು ನೆಲಸಿದಾಗಲೂ ರೈತಸಂಘಟನೆಯತ್ತ, ಹಳ್ಳಿಗಳತ್ತ ನನಗೆ ಒಲವಿತ್ತು. ಗ್ರಾಮೀಣ ಪ್ರದೇಶದ ಬಡಜನತೆಯನ್ನು ಸಂಘಟಿಸಿ, ಅವರನ್ನು ಬಂಡವಾಳಶಾಹಿ – ಭೂಮಾಲಿಕ ಶಕ್ತಿಗಳ ಮತ್ತು ಸಿದ್ಧಾಂತಗಳ ಪ್ರಭಾವದಿಂದ ಬಿಡುಗಡೆಗೊಳಿಸಿ ಕಾರ್ಮಿಕ ವರ್ಗದ ಸಿದ್ಧಾಂತ ಮತ್ತು ಐಕ್ಯದ ಪ್ರಭಾವ ಪಡಿಗೆ ತರುವ ಕೆಲಸವು ನಡೆಯದೆ ಪ್ರಜಾಪ್ರಭುತ್ವ ಚಳುವಳಿ ಮತ್ತು ಕ್ರಾಂತಿಯತ್ತ ಮುಂದೆ ಹೋಗುವುದು ಅಸಾಧ್ಯ. ಈ ದಿಸೆಯಲ್ಲಿ ಹೆಚ್ಚು ಮಂದಿ ಹೆಚ್ಚು ಶ್ರಮ ವಹಿಸುವುದು ಅವಶ್ಯವೆಂದು ಯಾವಾಗಲೂ ಯೋಚಿಸುತ್ತಿದ್ದೆ. ಇದೀಗ ಹಳ್ಳಿಗಳತ್ತ, ರೈತ ಸಂಘಟನೆಯತ್ತ ಗಮನವೀಯುವ ಅವಕಾಶ ಬಂದೊದಗಿದೆ.

ರೈತ ಸಂಘಟನೆಯನ್ನು ಕಟ್ಟಬೇಕಾದರೆ ಮುಂದಾಳುಗಳೂ, ಕಾರ್ಯಕರ್ತರುಗಳೂ ಹಳ್ಳಿಗಳತ್ತ ಹೋಗಿ ಹಳ್ಳಿಯ ಬಡಜನತೆಯ ಸಂಪರ್ಕ ಮಾಡಿ, ಅವರ ಜೀವನ ವಿಧಾನದಲ್ಲಿ ಭಾಗಿಗಳಾಗಿ, ಪರಿಸ್ಥಿತಿಯನ್ನು ಅಭ್ಯಸಿಸುವುದು ಅವಶ್ಯವಿದೆ. ಬಡಜನತೆಯೊಂದಿಗೆ ಬೆರೆತು, ಅವರೊಂದಿಗೆ ಹೋರಾಡಿ ಅವರ ವಿಶ್ವಾಸವನ್ನು ಪಡೆಯಬೇಕಿದೆ, ಈ ದೃಷ್ಟಿಯನ್ನಿರಿಸಿ ಹಳ್ಳಿಯಿಂದ ಹಳ್ಳಿಗೆ ಕಾಲ್ನಡೆ ಜಾತಾ ಹೋಗುವ ಅಭಿಪ್ರಾಯ ಮಾಡಲಾಯಿತು. ಸುಮಾರು ಹನ್ನೆರಡು ವರ್ಷಗಳ ಹಿಂದೆ ಜನಸಂಘಟನೆ ಮತ್ತು ರಾಜಕೀಯ ಕೆಲಸ ಎಲ್ಲಿಂದ ಪ್ರಾರಂಭ ಮಾಡಿದೆನೋ ಮತ್ತೆ ಅದೇ ಹಳ್ಳಿಯಿಂದ ಈ ಕೆಲಸವನ್ನು ಪ್ರಾರಂಭಿಸಿದೆ. ಸಾಹಿತ್ಯ ಮಾರಾಟ, ಐಕ್ಯರಂಗಕ್ಕೆ ಚಂದಾದಾರರನ್ನು ಸೇರಿಸುವುದು ಜಾತಾದ ಕಾರ್ಯಕ್ರಮದಲ್ಲಿ ಸೇರಿತ್ತು. ಜಾತಾ ಸಂದರ್ಭದಲ್ಲಿ ನೂರಕ್ಕೂ ಮೇಲ್ಪಟ್ಟು ಚಂದಾದಾರರನ್ನು ಐಕ್ಯರಂಗಕ್ಕೆ ಸೇರಿಸುವುದೂ, ಸುಮಾರು ಒಂದೂ ಮುಕ್ಕಾಲು ಸಹಸ್ರ ರೂಪಾಯಿಯ ಸಾಹಿತ್ಯ ಮಾರುವುದೂ ಸಾಧ್ಯವಾಯಿತು.

ಹಳ್ಳಿಯಿಂದ ಹಳ್ಳಿಗೆ ಕಾಲ್ನಡೆಯಲ್ಲಿ ಹೋಗುವುದು ಅನುಸರಿಸಿದ ವಿಧಾನ. ದಾರಿಯುದ್ದಕ್ಕೂ ಬಡಜನರ ಮನೆಗಳಿಗೆ ಭೆಟ್ಟಿ ನೀಡುವುದು, ದೊಡ್ಡ ಸಭೆಗಳಲ್ಲಿ ಭಾಷಣ ಮಾಡುವ ಬದಲು ಮನೆ ಮನೆಗೆ ಹೋಗಿ ವಿವರಣೆ ನೀಡುವುದು, ಸಣ್ಣಪುಟ್ಟ ಸಭೆಗಳನ್ನು ನಡೆಸುವುದು ನಮ್ಮ ಕಾರ್ಯಕ್ರಮವಾಗಿತ್ತು. ಬೇಸಿಗೆಯ ಉರಿಯುವ ಸುಡುಬಿಸಿಲಿನಲ್ಲಿ ಧೂಳು ತುಂಬಿದ ಹಳ್ಳಿಯ ರಸ್ತೆಗಳಲ್ಲಿ ಮೈಲುಗಟ್ಟಲೆ ನಡೆಯುವುದು ಜಾತಾದಲ್ಲಿದ್ದ ಕೆಲವರಿಗೆ ಕೆಲವೊಮ್ಮೆ ಕಷ್ಟವೆನಿಸಿದರೂ, ಉತ್ಸಾಹ ಮಾತ್ರ ಕುಂದಿರಲಿಲ್ಲ. ದಾರಿಬದಿಯಲ್ಲಿ ಅಥವಾ ತಂಗಿದಲ್ಲಿ ನೀರು ದೊರೆತಾಗ ಬಟ್ಟೆ ಒಗೆದು ಸ್ನಾನ ಮಾಡುತ್ತಿದ್ದೆವು. ಬಟ್ಟೆಗಳು ಒಣಗುವ ತನಕ ಕಾಯಲು ಕೆಲವೊಮ್ಮೆ ಸಮಯವಿಲ್ಲದಾಗ ಒದ್ದೆ ಬಟ್ಟೆಗಳನ್ನ ಚೀಲದಲ್ಲಿ ತುರುಕಿಕೊಳ್ಳಬೇಕಾಗಿ ಬಂದಿತ್ತು. ಊಟ ಮತ್ತು ವಸತಿ ವ್ಯವಸ್ಥೆ ಬಡವರಲ್ಲಿ ಕಡುಬಡವರ ಮನೆಯಲ್ಲಿ ನಡೆದಿತ್ತು. ಜಾತಿ, ಮತ ಭೇದವಿಲ್ಲದೆ ಎಲ್ಲರಲ್ಲೂ ಉಂಡು ತಿನ್ನುವ ಅನುಭವವು ಜಾತಾದಲ್ಲಿ ಬಂದ ಕೆಲವರಿಗೆ ಹೊಸದಾಗಿತ್ತು. ಕೆಲವರಿಗೆ ಮೊದಮೊದಲು ಇದು ಒಗ್ಗಿಲ್ಲವಾದರೂ ಕೊನೆಗಾಗುವಾಗ ಖುಷಿಯಿಂದಲೇ ಹೊಂದಿಕೊಂಡರು.

ನಾವು ಭೆಟ್ಟಿ ಇತ್ತ ಮತ್ತು ಉಂಡು ತಿಂದು ಮಲಗಿದ ಮನೆಗಳಲ್ಲಿದ್ದವರೆಲ್ಲರೂ ಕಡುಬಡವರೇ ಆಗಿದ್ದರು. ಹುಲ್ಲಿನ ಚಾವಣಿಯ ಹೊಗೆ ತುಂಬುವ ಪುಟ್ಟ ಮನೆ, ಉಪ್ಪು ಮೆಣಸು ಸೇರಿಸಿಕೊಂಡು ಗಂಜಿ ಊಟ, ಸಕ್ಕರೆ ಮತ್ತು ಹಾಲಿಲ್ಲದ ಚಾ, ಒಂದು ತಪ್ಪಿದರೆ ಎರಡು ಮಿಣುಕು ದೀಪಗಳು, ಮಲಗಲು ಹುಲ್ಲಿನ ಹರಕು ಚಾಪೆಗಳು, ಚಪ್ಪಲಿಯಿಲ್ಲದ ಕಾಲುಗಳು, ಹಾಕಲು ಅಂಗಿ ಇಲ್ಲದ ಬರಿ ಮೈಗಳು, ಧಾರಾಳವಾಗಿರುವ ಮಸಿ ತುಂಬಿದ ದೇವರ ಫೋಟೋಗಳು ಮತ್ತು ಕ್ಯಾಲೆಂಡರ್‌ಗಳು – ಇವು ಈ ಬಡಜನರ ಜೀವನದ ಚಿತ್ರ. ಇನ್ನೊಂದೆಡೆ ಬಡಜನರ ಭೂಮಿಯನ್ನು ಕಬಳಿಸಿ, ಅವರಿಂದ ಕಡಿಮೆ ಕೂಲಿಗೆ ದುಡಿಸಿ, ಮೋಸದಿಂದ ಕೊಬ್ಬಿರುವ ಶ್ರೀಮಂತ ಭೂಮಾಲಕರ ವೈಭವದ ಜೀವನ. ಭೂತ ಕಟ್ಟುವ ಬೊಳಿಯ ಎಂಬವರಲ್ಲಿ ಸಕ್ಕರೆ ಮತ್ತು ಹಾಲು ಹಾಕದೆ ಧಾರಾಳವಾಗಿ ಚಾಪುಡಿ ಹಾಕಿ ಬೇಕಾದಷ್ಟು ಕುದಿಸಿ ಪ್ರೀತಿಯಿಂದ ಮಾಡಿ ಕೊಟ್ಟ ಚಹಾವನ್ನು ಎಂದೆಂದಿಗೂ ಮರೆಯುವುದು ಅಸಾಧ್ಯ.

ಬಂಡವಾಳಶಾಹಿ ಪದ್ಧತಿಯು ಬೆಳವಣಿಗೆಯಾಗುವಾಗ ಕೃಷಿರಂಗದ ಮೇಲೂ ಹಳ್ಳಿಯ ಜನತೆಯ ಮೇಲೂ ಆಗುವ ಪರಿಣಾಮಗಳೂ, ಬದಲಾಗಿರುವ ಕೃಷಿ ಸಂಬಂಧಗಳೂ ಸ್ಪಷ್ಟವಾಗಿ ಗೋಚರಿಸುತ್ತಿದ್ದುವು. ಸಂಖ್ಯೆಯಲ್ಲಿ ಬೆರಳೆಣಿಕೆಯಷ್ಟೆ ಇರುವ ಆದರೆ ಪ್ರಭಾವಶಾಲಿಗಳಾದ ಭೂಮಾಲಕರು ಮತ್ತು ಶ್ರೀಮಂತ ರೈತರದ್ದು ಒಂದು ವಿಭಾಗವಾದರೆ, ಬಡರೈತರು ಮತ್ತು ಕೃಷಿ ಕೂಲಿಗಾರರು ಸೇರಿದಂತೆ ಸಂಖ್ಯೆಯಲ್ಲಿ ದೊಡ್ಡದಿರುವ ಕಡುಬಡವರು ಇನ್ನೊಂದೆಡೆ. ಇವರ ಮಧ್ಯೆ ದಿವಾಳಿಯಾಗುವ ಪರಿಸ್ಥಿತಿಯಲ್ಲಿರುವ ಮಧ್ಯಮ ರೈತರು ಬೇರೆ. ಕಡುಬಡವರಲ್ಲಿ ಭೂರಹಿತ ಕೃಷಿ ಕೂಲಿಗಾರರೂ, ಸರಕಾರಿ ಭೂಮಿಯಲ್ಲಿ ವಾಸಮಾಡಿ ಕೃಷಿಕೂಲಿ ಮಾಡಿ ಬದುಕುವವರೂ, ಅಲ್ಪಸ್ವಲ್ಪ ಭೂಮಿಯಿದ್ದರೂ (ಇವರಲ್ಲಿ ಕೆಲವರು ಹಿಂದೆ ಗೇಣಿದಾರ ರೈತರಾಗಿದ್ದು ಈಗ ಒಂದಿಷ್ಟು ಭೂಮಿ ಪಡೆದವರು) ಜೀವನಕ್ಕೆ ಸಾಲದೆ ಕೂಲಿ ಮಾಡುವವರೂ ಸೇರಿರುವರು. ತುಣುಕು ಭೂಮಿ ಇರುವ ಬಡರೈತರು ಭೂಮಿಯನ್ನು ಉಳಿಸಿಕೊಳ್ಳಲಾರದ ಸ್ಥಿತಿಯಲ್ಲಿರುವರು. ಸಹಸ್ರಾರು ಸಂಖ್ಯೆಯಲ್ಲಿರುವ (ಜಾತಾವು ಹೋದ ಸುಳ್ಯ, ಪುತ್ತೂರು ಮತ್ತು ಬೆಳ್ತಂಗಡಿ ತಾಲ್ಲೂಕುಗಳಲ್ಲಿ ಇವರ ಸಂಖ್ಯೆ 50,000ಕ್ಕೂ ಮಿಕ್ಕಿ ಇದೆ) ಸರಕಾರಿ ಭೂಮಿಯಲ್ಲಿ ಮನೆಮಾಡಿಕೊಂಡು ಅಲ್ಪಸ್ವಲ್ಪ ಕೃಷಿ ಮಾಡಿಕೊಂಡು ಒಟ್ಟೊಟ್ಟಿಗೆ ಕೃಷಿ ಕೂಲಿ ಮಾಡಿ ಬದುಕುವ ಜನರಿಗೆ ತಮ್ಮ ಸ್ವಾಧೀನವಿರುವ ಭೂಮಿಗೆ ಹಕ್ಕು ಪತ್ರ ಪಡೆಯುವ ಸಮಸ್ಯೆ ಇದೆ. ಕೆಲವೆಡೆ ಈಗಲೂ ದಿನಕ್ಕೆ ರೂಪಾಯಿ ಮೂರರಿಂದ ಐದರವರೆಗೆ ಸಂಬಳಕ್ಕೆ ದುಡಿಯುವ ಸಹಸ್ರಾರು ಸಂಖ್ಯೆಯಲ್ಲಿರುವ ಕೃಷಿ ಕೂಲಿಗಾರರಿಗೆ ಹೆಚ್ಚಿಗೆ ಸಂಬಳ ದೊರೆಯಬೇಕಾಗಿದೆ. ವಾಸಕ್ಕೆ ಮನೆ, ಮಕ್ಕಳಿಗೆ ಓದಲು ಶಾಲೆ, ಔಷಧಗಳಿಗಾಗಿ ವೈದ್ಯಕೀಯ ಸವಲತ್ತು– ಇವೆಲ್ಲಾ ಬೇಕಿದೆ. ಶ್ರೀಮಂತರ ರೈತರಿಂದ ಮೊದಲ್ಗೊಂಡು ಬಡರೈತರವರೆಗೆ ಬೆಳೆಸಿದ ಬೆಳೆಗೆ ಲಾಭದಾಯಕ ಬೆಲೆ ದೊರೆಯದೆ, ಸಾಲದ ಹೊರೆಯಿಂದಲೂ ದಿನೇ ದಿನೇ ಹೆಚ್ಚುತ್ತಿರುವ ಜೀವನ ವೆಚ್ಚದಿಂದಲೂ ಕಂಗೆಟ್ಟಿದ್ದಾರೆ. ಕಡುಬಡವರಿಂದ ಹಿಡಿದು ಮೇಲಿನವರೆಗೂ ಎಲ್ಲರಲ್ಲೂ ಹೋರಾಟ ನಡೆಸಿದರೆ ಆಗಬಹುದೆಂಬ ಅಭಿಪ್ರಾಯ ಕಂಡು ಬಂತು.

ಬಡಜನರಲ್ಲಿ ವರ್ಗ ಪ್ರಜ್ಞೆ, ಮತ್ತು ರಾಜಕೀಯ ಪ್ರಜ್ಞೆ ಇಲ್ಲ. ಆದರೆ ತಾವು ಶೋಷಣೆಗೆ ಒಳಗಾಗಿರುವೆವು ಎಂಬ ಅರಿವು ಸ್ವಲ್ಪಸ್ವಲ್ಪವಾಗಿ ಮೂಡುತ್ತಲಿದೆ. ಮಾರ್ಕ್ಸ್‌ವಾದಿ ಕಮ್ಯೂನಿಸ್ಟ್ ಪಕ್ಷದ ಅಥವಾ ಪ್ರಾಂತ ರೈತಸಂಘದ ಚಟುವಟಿಕೆ ಇರುವೆಡೆಗಳಲ್ಲಿ ಕೆಲವರಲ್ಲಿ ಸ್ವಲ್ಪ ವರ್ಗಜಾಗೃತಿ ಇದೆ. ರಾಜ್ಯದಲ್ಲಿ ಸರಕಾರ ಬದಲಾದುದು ಗೊತ್ತಿದೆ. ಆದರೆ ಯಾರು ಬಂದರೂ ತಮ್ಮ ಸಮಸ್ಯೆಗಳಿಗೆ ಪರಿಹಾರವಿಲ್ಲವೆಂಬ ಅಭಿಪ್ರಾಯ ಬಹಳ ಮಂದಿಗಿದೆ. ಬದಲಿ ಧೋರಣೆ ಮತ್ತು ಬದಲಿ ವ್ಯವಸ್ಥೆಗಳ ಬಗ್ಗೆ ಅರಿವಿಲ್ಲ. ಅಲ್ಪಸ್ವಲ್ಪ ಭೂಮಿ ದೊರೆತ ಹಿಂದೆ ಗೇಣಿದಾರರಾಗಿದ್ದ ರೈತರಿಗೆ ಈಗ ಸಂಘಟನೆ ಬೇಕೆಂಬ ಆಸಕ್ತಿ ಇದ್ದಂತಿಲ್ಲ. ಆದರೆ ದೊರೆತ ಭೂಮಿಯನ್ನು ಉಳಿಸಿಕೊಳ್ಳಬೇಕಾದರೆ ಒಗ್ಗಟ್ಟಾಗಿ ಹೋರಾಡಿ ಬಂಡವಾಳಶಾಹಿ ವ್ಯವಸ್ಥೆಯನ್ನು ವಿರೋಧಿಸಲೇಬೇಕು ಎಂದು ವಿವರಿಸಿದಾಗ ಆಸಕ್ತಿ ತೋರುತ್ತಾರೆ. ನಾವು ಜಾತಾ ಹೋದ ಮೂರು ತಾಲ್ಲೂಕುಗಳಲ್ಲೂ ಮಾತನಾಡುವ ಮತ್ತು ನಾವು ಮಾತನಾಡಿದ ಭಾಷೆ ತುಳು. ಕನ್ನಡ ಅರ್ಥವಾಗುವುದಾದರೂ ತುಳುವಿನಲ್ಲಿ ಹೇಳಿದರೆ ಸರಿಯಾಗಿ ತಿಳಿದುಕೊಳ್ಳುತ್ತಾರೆ. ಗೋಕಾಕ್ ಚಳುವಳಿಯ ಬಗ್ಗೆ ಯಾರಿಗೂ ಏನೂ ತಿಳಿದಂತಿಲ್ಲ. ರಾಜಕೀಯ ಚಟುವಟಿಕೆಗಿಂತಲೂ ಹೆಚ್ಚಿನ ಆಸಕ್ತಿ ಇರುವುದು ಕೋಳಿ ಜೂಜು, ಜಾತ್ರೆ ಒತ್ತೆಕೋಲ ಇವುಗಳ ಮೇಲೆ.

ಧಾರ್ಮಿಕ ಪುನರುತ್ಥಾನದ ಪ್ರಭಾವ ಎಲ್ಲೆಡೆಗಳಲ್ಲೂ ಕಂಡು ಬರುತ್ತಿದೆ. ಧಾರ್ಮಿಕ ಚಟುವಟಿಕೆಗಳೂ, ಜಾತೀಯ ಪ್ರಭಾವವೂ, ಹೊಸ ದೇವಸ್ಥಾನ, ಗುಡಿ ಮತ್ತು ಮಸೀದಿಗಳ ಸ್ಥಾಪನೆಯೂ ತೀವ್ರ ಗತಿಯಲ್ಲಿ ಭಯಾನಕವಾಗಿ ಮುಂದುವರೆದಿವೆ. "ಹಿಂದು ನಾವು ಒಂದು" ಎಂಬ ಬಹುಸಂಖ್ಯಾತ ಕೋಮುವಾದದ ಘೋಷಣೆಯೂ, "ಮುಸಲ್ಮಾನರು ನಾವೆಲ್ಲಾ ಒಂದು" ಎಂಬ ಅಲ್ಪಸಂಖ್ಯಾತ ಕೋಮುವಾದ ಘೋಷಣೆಯೂ ಕಾಡ್ಗಿಚ್ಚಿನಂತೆ ಹಬ್ಬುತ್ತಿದೆ. ಇವೆರಡೂ ಸರಿಯಲ್ಲ; "ಬಡವರು, ದುಡಿಯುವ ಜನ ನಾವೆಲ್ಲಾ ಒಂದು" ಎಂಬ ಘೋಷಣೆಯೇ ಸರಿ ಎಂದು ನಾವು ಸಾರುತ್ತಾ ಬಂದೆವು. ಎಲ್ಲಾ ಜಾತಿ, ಧರ್ಮಗಳ ಶ್ರೀಮಂತ ಬಡವನನ್ನು ಸುಲಿದು ತಿನ್ನುತ್ತಾನೆ. ಎಲ್ಲ ಜಾತಿ, ಮತ, ಧರ್ಮಗಳನ್ನು ಮೀರಿ ಎರಡು ವರ್ಗಗಳಿವೆ. ಅವು ದುಡಿಯುವ ವರ್ಗ ಮತ್ತು ದುಡಿಸುವ ವರ್ಗ. ಶೋಷಣೆಯಿಂದ ಮುಕ್ತರಾಗಬೇಕಾದರೆ ಜಾತಿ, ಮತ, ಧರ್ಮದ ಕಟ್ಟಲೆಗಳನ್ನು ಮೀರಿ ದುಡಿಯುವ ಜನರೆಲ್ಲಾ ಒಂದಾಗಬೇಕು ಎಂದು ವಿವರಿಸಿದಾಗ ಬಡಜನರು ಖುಷಿ ಪಡುವುದು ಕಂಡು ಬಂತು.

ಸಾಮಾಜಿಕವಾಗಿ ಹಳೆಯ ಪಾಳೇಗಾರಿ ಪದ್ಧತಿಯ ಮೌಲ್ಯಗಳೇ ಜಾಸ್ತಿ. ಜಾತಿ, ಧರ್ಮ ಮತ್ತು ಹಳೆಯ ಸಂಪ್ರದಾಯಗಳು ತಾಂಡವವಾಡುತ್ತಿವೆ. ಒಬ್ಬನ ಮೇಲೆ ಇನ್ನೊಬ್ಬ ಸೇಡು ತೀರಿಸಲು "ಮಾಟ" (ಮಾಂತ್ರಿಕನ ಮೂಲಕ, ಎದುರುವಾದಿಯ ಮೇಲೆ, ತಮಗಾಗದವನ ಮೇಲೆ ತಂತ್ರ ಮಾಡುವುದು) ಮಾಡುತ್ತಾರೆ ಎಂಬ ದೂರು ಹತ್ತಾರು ಕಡೆ ಬಂತು. ಸರಕಾರಿ ಭೂಮಿಯಿಂದ ಹಿಂದುಳಿದ ಜಾತಿಗೆ ಸೇರಿದ ಬಡವನೊಬ್ಬನನ್ನು ಬಲಾತ್ಕಾರದಿಂದ ಒಕ್ಕಲೆಬ್ಬಿಸುವುದು ಸಾಧ್ಯವಾಗದೆ ಬ್ರಾಹ್ಮಣ ಭೂಮಾಲಿಕರು ಮಾರಣ ಹೋಮ ಮಾಡಿಸಿ ಬಿಡಿಸಿದರು ಎಂಬ ದೂರು ನಮ್ಮಲ್ಲಿಗೆ ಬಂತು. ಪುತ್ತೂರು ತಾಲ್ಲೂಕಿನ ಆರ್ಯಾಪು ಗ್ರಾಮದಲ್ಲಿ ಬಡಗೇಣಿದಾರ ರೈತನಿಗೆ ಭೂನ್ಯಾಯ ಮತ್ತು ಕೋರ್ಟುಗಳ ಮೂಲಕ ಭೂಮಿಯ ಹಕ್ಕು ದೊರೆತಿರುವುದಾದರೂ ಮಾಟ ಮಾಡಿಸಿ ಭೂಮಿಯಿಂದ ಬಿಡಿಸಲು ಪ್ರಯತ್ನ ನಡೆಸುತ್ತಿದೆಯಾಗಿ ಸುದ್ದಿ ದೊರೆಯಿತು. ಮಾವ, ಗಂಡ ಮತ್ತು ಜಾನುವಾರುಗಳನ್ನೆಲ್ಲಾ ಕಳೆದುಕೊಂಡು ಅನಾರೋಗ್ಯದಿಂದ ಇರುವ ಮಗಳೊಂದಿಗೆ ವಾಸಿಸುವ ವಿಧವೆ ಮುದುಕಿ ತನ್ನ ಎಲ್ಲ ದುರವಸ್ಥೆಗೂ ಧನಿಯವರು ಮಾಟ ಮಾಡಿರುವುದೇ ಕಾರಣ ಎಂದಳು. ಭೂಮಿಯನ್ನು ಯಾರಿಗಾದರೂ ಒಪ್ಪಿಸಿ ಎಲ್ಲಾದರೂ ಹೋಗಬೇಕೆಂಬ ಒಂದೇ ಹಠ ಆಕೆಗಿದೆ. ನಾವು ಇನ್ನೂ ದೊಡ್ಡ ಮಂತ್ರವಾದಿಯನ್ನು ತಂದು ಮರು ಮಾಟ ಮಾಡುವೆವು ಎಂದೂ, ಧೈರ್ಯಕ್ಕಾಗಿ ನಾವೂ ಅಲ್ಲಿಗೆ ಆಗಾಗ ಬರುತ್ತಿರುವೆವೆಂದೂ ಹೇಳಿದಾಗ ಮುದುಕಿಗೆ ಸ್ವಲ್ಪ ಧೈರ್ಯ ಬಂತು! ವರದಕ್ಷಿಣೆ ಪದ್ಧತಿಯು ಅತೀ ಬಡವರನ್ನು ಕಷ್ಟಕ್ಕೊಳಗಾಗಿಸಿದೆ.

ಕಾನೂನು ಮತ್ತು ಸರಕಾರಿ ಯೋಜನೆಗಳ ಪ್ರಯೋಜನಗಳನ್ನೆಲ್ಲಾ ಹೆಚ್ಚಿನಂಶ ಇರುವವರೇ ದಕ್ಕಿಸಿಕೊಂಡಿರುವರು. ಸರಕಾರದ ಯೋಜನೆಗಳ ವೈಫಲ್ಯದ ಬಗೆಗಾಗಲೀ, ಜನತೆಯ ಸಮಸ್ಯೆಗಳ ಬಗೆಗಾಗಲೀ ಅಧಿಕಾರಿಗಳೂ, ಜನರ ಪ್ರತಿನಿಧಿಗಳೆನಿಸಿದವರೂ ಗಮನವೀಯುತ್ತಿಲ್ಲವೆಂಬುದು ನಾವು ಹೋದಲ್ಲೆಲ್ಲಾ ಕಂಡುಬಂತು. ಬಿಳಿನೆಲೆ ಎಂಬ ಗ್ರಾಮದಲ್ಲಿ ಸರಕಾರಿ ಭೂಮಿಯಲ್ಲಿ ಹಲವಾರು ವರ್ಷಗಳಿಂದ ಕಷ್ಟಪಟ್ಟು ವಾಸಿಸುವ 500ಕ್ಕೂ ಮಿಕ್ಕಿ ಬಡ ಕುಟುಂಬಗಳಿದ್ದರೆ, ಸರಕಾರದ ದಸ್ತಾವೇಜುಗಳಲ್ಲಿ ಈ ಪ್ರದೇಶವು ಜನವಾಸಿಸದ ಅರಣ್ಯಭೂಮಿಯಾಗಿಯೇ ಇದೆ ಎಂದಿದೆ!

ಹಳ್ಳಿಯ ಕಡುಬಡವರ ಸಂಘಟನೆ ಮತ್ತು ಸಮಸ್ಯೆಗಳ ಆಧಾರಿತವಾಗಿ ಪ್ರಬಲ ಚಳುವಳಿ ನಡೆಸುವ ಸಾಧ್ಯತೆ ಇದೆ. ಇದರ ಅವಶ್ಯವೂ ಇದೆ. ಇನ್ನುಳಿದ ವಿಭಾಗಗಳ ದೊಡ್ಡ ಅಂಶದ ಬೆಂಬಲವನ್ನೂ ಪಡೆದುಕೊಂಡು ಚಳುವಳಿ ನಡೆಸುವುದು ಅವಶ್ಯ. ಇದು ಸಾಧ್ಯವೂ ಇದೆ. ಕಾಲ್ನಡೆ ಜಾತಾ ಹೋದ ಸಂದರ್ಭದಲ್ಲಿನ ಅನುಭವ ಮತ್ತು ಜನರು ತೋರಿರುವ ಆಸಕ್ತಿಯನ್ನೂ ಗಮನದಲ್ಲಿರಿಸಿ ಈ ಪ್ರದೇಶದಲ್ಲಿ ಸಂಘಟಿತ ಹೋರಾಟ ನಡೆಸುವ ಯೋಜನೆಯೂ ಇದೆ. ಈ ಪ್ರದೇಶದಲ್ಲಿ ತೆಗೆದುಕೊಳ್ಳುವ ಪ್ರಶ್ನೆಗಳು ಇಡೀ ದ. ಕ. ಜಿಲ್ಲೆಯ ಹಾಗೂ ಬಹುತೇಕ ರಾಜ್ಯದ ಬೇರೆ ಬೇರೆ ಪ್ರದೇಶಗಳಲ್ಲೂ ಇರುವ ಸಮಸ್ಯೆಗಳಾಗಿವೆ. ಹಳ್ಳಿಯ ಬಡ ರೈತ ಮತ್ತು ಕೆಲಸಗಾರರ ಪ್ರಶ್ನೆಗಳಷ್ಟೇ ಸೀಮಿತಗೊಳಿಸದೆ ಎಲ್ಲಾ ರೈತರನ್ನೂ ಬಾಧಿಸುವ ಸಮಸ್ಯೆಗಳಿಗೆದುರಾಗಿಯೇ ವಿಶಾಲ ಐಕ್ಯತೆಯಿಂದ ಹೋರಾಡಲೂ ಯೋಜನೆ ಹಾಕುವುದೂ ಅವಶ್ಯ. ಹೋರಾಟದೊಂದಿಗೆ ಸಂಘಟನೆಯನ್ನು ಬೆಳೆಸುವುದು, ರಾಜಕೀಯ ಪ್ರಜ್ಞೆಯನ್ನು ಉಂಟುಮಾಡುವುದು, ಕಾರ್ಯಕರ್ತರಿಗೆ ತರಬೇತಿ ನೀಡುವುದು ಮತ್ತು ಗ್ರಾಮ ಮಟ್ಟದಿಂದ ಸಂಘಟನೆ ಮತ್ತು ಮುಖಂಡತ್ವವನ್ನು ಕಟ್ಟುವ ಕೆಲಸಗಳಿಗೆ ಗಮನವೀಯಬೇಕಾಗಿದೆ. ★

ಪೇಜಾವರ ಶ್ರೀಗಳೇ, ಆಳ್ವರೇ, ಶೆಣೈಯವರೇ,

ಮೆರವಣಿಗೆ, ಘೋಷಣೆ, ಉತ್ಸವ ಇನ್ನು ಸಾಕು; ಜನರ ಆರ್ಥಿಕ ಉದ್ಧಾರ ಸಾಧನೆಯಾಗಲಿ

ನೂರಾರು ಜಾತಿ, ಪಂಥ, ಸಂಪ್ರದಾಯಗಳಿಂದ ವಿಚ್ಛಿನ್ನವಾಗಿರುವ ಹಿಂದೂ ಧರ್ಮವನ್ನು ಮತ್ತೆ ಏಕತೆ, ಸಮಾನತೆ, ಸಹಬಂಧುತ್ವಗಳತ್ತ ಮುನ್ನಡೆಸುವ ಸದುದ್ದೇಶದಿಂದ ಗತ ಮೂರು ವರ್ಷಗಳಿಂದ ಎಲ್ಲೆಡೆಗಳಲ್ಲೂ ಹಿಂದೂ ಸಮಾಜೋತ್ಸವವನ್ನು ಬೃಹತ್ ಮೆರವಣಿಗೆ, ಸಾರ್ವಜನಿಕ ಸಭೆ, ಧಾರ್ಮಿಕ ಹಾಗೂ ಸಾಮಾಜಿಕ ನಾಯಕರ ಭಾಷಣಗಳು, ವೇಷಗಳ ಹಬ್ಬ, ಸಂತಸದ ಸುಗ್ಗಿ ಇತ್ಯಾದಿಯಾಗಿ ಆಚರಿಸಲಾಗುತ್ತಿರುವುದು, ಓಂಕಾರ ಲಾಂಛನ, ಭಗವಾಧ್ವಜ ಹಾರಿಸುವಿಕೆಯ ಮೂಲಕ, ಉತ್ಸವ ದೊಡನೆ ಚೇತನವನ್ನು ಹೊಡೆದೆಬ್ಬಿಸುವುದು ದೊಡ್ಡ ಆಕರ್ಷಣೆಯಾಗಿ ಪರಿಣಮಿಸಿದೆ. ಅತ್ಯಂತ ವಿಜೃಂಭಣೆಯಿಂದ, ಕಟು ಶಿಸ್ತಿನಿಂದ ಈ ಉತ್ಸವವನ್ನು ಸಂಘಟಿಸಿ ಆಕರ್ಷಣೀಯವಾಗಿ ಜರುಗಿಸಿದುದ್ದಕ್ಕಾಗಿ ಉತ್ಸವ ಅಭಿನಂದನೆಗೆ ಅರ್ಹವಾಗಿದೆ.

ಹಿಂದೂ ಸಮಾಜ ಎಂದೂ ಆಚಾರ ವಿಚಾರ, ಸಂಪ್ರದಾಯ, ಸಂಸ್ಕೃತಿ, ಭಕ್ತಿ, ಭಜನೆ ಇತ್ಯಾದಿಗಳ ಅಭಾವದಿಂದ ಕುಂದಿರುವುದಿಲ್ಲ. ಸುಪ್ತ ಚೇತನ ಅದರೊಳಗೆ ಸದಾ ಪ್ರಜ್ವಲಿಸುತ್ತಲೇ ಇದೆ. ಆದರೆ ಇಂದು ಹಿಂದೂ ಸಮಾಜದಲ್ಲಿ ಎದ್ದು ಕಾಣಿಸುತ್ತಿರುವ ಉಚ್ಚ-ನೀಚ ತಾರತಮ್ಯಗಳ ಅತಿರೇಕ, ಮತ ಪಂಗಡಗಳ ನಡುವಿನ ವೈಷಮ್ಯ, ವಿವಿಧ ಗುಂಪಿನ ನಡುವಿನ ಘರ್ಷಣೆ, ನಿರ್ಬಲರ ಶೋಷಣೆ, ಅತೀವ ಬಡತನದಲ್ಲಿರುವ ಅಸಂಖ್ಯ ದುರ್ದೈವಿಗಳತ್ತ ಅಲಕ್ಷ್ಯ ಭಾವನೆ, ಮೇಲ್ಜಾತಿಗಳವರಲ್ಲಿರುವ ದರ್ಪ, ಹರಿಜನರತ್ತ ತಾತ್ಸಾರ ಭಾವನೆ ಇಂದು ನಿನ್ನೆಯ ಅನಾಹುತವಲ್ಲ. ಇದು ಹಿಂದೂ ಧರ್ಮ ಬೆಳೆದಂತೆಲ್ಲಾ ವ್ಯಾಪಿಸಿಕೊಂಡ ಬದನಿಕೆ. ಇದನ್ನು ಉತ್ಸವ, ಮೆರವಣಿಗೆಗಳಿಂದ ಕೀಳುವುದು ಅಸಾಧ್ಯ. ಪ್ರವಚನ, ಭಾಷಣಗಳು ಹಿಂದೂ ಧರ್ಮವನ್ನು ನುಂಗುತ್ತಿರುವ ಅಸ್ಪೃಶ್ಯತೆಯಿಂದ ಪಾರುಗೊಳಿಸುವಂತಿಲ್ಲ. ಈ ನಿಟ್ಟಿನಲ್ಲಿ ಹಿಂದೂ ಸಮಾಜದ ಉದ್ಧಾರ ಹಾಗೂ ಏಕತೆಯನ್ನು ಬಯಸುವ ಸದ್ಭಾವನೆ ಇರುವವರೆಲ್ಲಾ ಆಸಕ್ತಿ ತಳೆದಿರುವುದು ಸಂತೋಷದ ಸಂಗತಿ.

ಆದರೆ ನಿಜವಾದ ಉದ್ಧಾರ ಮೂಲದಿಂದಲೇ ಆರಂಭವಾಗಬೇಕು. ಸಮಾಜದ ಅತ್ಯಂತ ಕೆಳ ಅಂತಸ್ತಿನಲ್ಲಿರುವ ಜನರ ಉದ್ಧಾರದಿಂದ ಸುಧಾರಣೆ ಮೂಡಿಬರಬೇಕು. ದೇವಸ್ಥಾನಗಳು, ಪೂಜಾ ಮಂದಿರಗಳೂ ಸಮಾನತೆ ಪಾಲನೆಯ ದೇಗುಲಗಳಾಗಬೇಕು. ಮೂಲ ಏಕತೆಯ ಅರಿವು ಅಲ್ಲಿಂದಲೇ ಆರಂಭಗೊಳ್ಳಬೇಕು.

- ಮೇಲ್ಜಾತಿಯವರ ದೇವಸ್ಥಾನಗಳಲ್ಲಿನ ಉತ್ಸವ ಕಾಲದಲ್ಲಿ ಸಮಾರಾಧನೆಯ ಎಂಜಲಿಗಾಗಿ ಬಡವರು, ಹರಿಜನರು ಗಂಟೆಗಟ್ಟಲೆ ಕಾದು ನಿಲ್ಲುವ ಕರುಣಾಜನಕ ದೃಶ್ಯ ಅದೃಶ್ಯವಾಗಬೇಕು.
- ಸಮಾಜದ ಪ್ರತಿಯೋರ್ವನೂ ಉದ್ಯೋಗಿಯಾಗಿ ಗೌರವಯುತ ಜೀವನ ನಡೆಸುವ ಅವಕಾಶ ಕಲ್ಪನೆಯಾಗಬೇಕು.
- ಸಮಾಜೋತ್ಸವದಂಥ ಬೃಹತ್ ಕಾರ್ಯಕ್ರಮಗಳಿಗಾಗಿ ಅಸಂಖ್ಯ ಜನರು ಸುರಿಸುವ ಬೆವರಿನ ಪ್ರತಿಯೊಂದು ಬೆವರಿನ ಹನಿ ಮತ್ತು ಉತ್ಸವಕ್ಕಾಗಿ ವ್ಯಯವಾಗುವ ಮೊತ್ತದ ಚಿಕ್ಕಾಸು ಕೂಡಾ ಸಮಾಜದ ದೀನದಲಿತರ ಉದ್ಧಾರಕ್ಕಾಗಿ ವಿನಿಯೋಗವಾಗಬೇಕು.
- ಮಠಾಧೀಶರ, ಸಂತರ, ಮೇಧಾವಿಗಳ, ಗಣ್ಯವ್ಯಕ್ತಿಗಳ ಭಾಷಣಗಳು ಸಮಾಜದ ದೀನದಲಿತರ ಆರ್ಥಿಕ, ಸಾಮಾಜಿಕ ಉನ್ನತಿಯ ಸ್ಫೂರ್ತಿಯನ್ನು ಬಡಿದೆಬ್ಬಿಸುವ ಕಹಳೆಯಾಗಿ ಪರಿಣಮಿಸಬೇಕು.
- ಸಮಾಜದ ಎಲ್ಲರಲ್ಲಿ ಸಾಮರಸ್ಯ, ಏಕತೆಗೆ ದೀನದಲಿತರ ಏಳ್ಗೆಯ ಧರ್ಮಯುದ್ಧ ಸಾರಲ್ಪಡಬೇಕು. ಆ ಯುದ್ಧದಲ್ಲಿ ಎಲ್ಲರೂ ಮುನ್ನುಗ್ಗಬೇಕು. ಅಸಂಖ್ಯ ಕಾರ್ಖಾನೆಗಳು, ಕಾರ್ಯಾಗಾರಗಳು ಮೇಲೆದ್ದು ಬಂದು ಜನರ ಉನ್ನತಿ ಸಾಧಿಸುವಂತಾಗಬೇಕು.

ಗತ ಮೂರು ವರ್ಷಗಳಲ್ಲಿ ಹಿಂದೂ ಸಮಾಜೋತ್ಸವ ಏಕತೆಯ ಹೊಸದೊಂದು ಯುಗವನ್ನು ಸೃಷ್ಟಿಸಿದೆ ಎಂದು ನೆಮ್ಮದಿ ತಳೆಯುವಾಗ ಉತ್ಸವದ ಸಂಘಟಕರು, ಹೊಟ್ಟೆಗಿಲ್ಲದ, ಉಡಲು ಬಟ್ಟೆಯಿಲ್ಲದ, ವಿದ್ಯಾರ್ಜನೆಯಿಂದ ವಂಚಿತರಾದ, ಉಳಕೊಳ್ಳಲು ಆಶ್ರಯವಿಲ್ಲದ ಅಸಂಖ್ಯ ದುರ್ದೈವಿ ಬಾಂಧವರ ಮೂಲ ಆವಶ್ಯಕತೆಗಳನ್ನು ಒದಗಿಸುವ ನವ ನಿರ್ಮಾಣ ಉತ್ಸವವೊಂದನ್ನು ಸತತ ನಡೆಸುವ ಮಹತ್ಸಾಧನೆಯಲ್ಲಿ ತೊಡಗತಕ್ಕದ್ದು. ಮನುಷ್ಯರಂತೆ ಬಾಳುವ ಹಕ್ಕು ಇಲ್ಲದೆ ನರಳುವ ಜನರೆಲ್ಲಾ ಸುಖ ಸಂಪನ್ನತೆ ಹೊಂದುವಂತೆ ಸಮಾಜೋನ್ನತಿಯ ನವ ಉತ್ಸವವೊಂದನ್ನು ಉತ್ಸವ ಸಮಿತಿಯ ಪ್ರಮುಖರಾದ ಸರ್ವ ಶ್ರೀ ಏರ್ಯ ಲಕ್ಷ್ಮೀನಾರಾಯಣ ಆಳ್ವರು, ವಾಮದೇವ ಶಣೈಯವರು, ಧರಣೇಂದ್ರ ಕುಮಾರ್ ಪಡಿವಾಳರು, ಎಸ್. ಆರ್. ಹೆಗಡೆಯವರು, ಮಧುಸೂಧನ, ಡಿ. ಕುಶೆಯವರು ಮತ್ತಿತರ ಅಸಂಖ್ಯರು ರೂಪಿಸಲಿ. ಶ್ರೀ ಪೆಜಾವರ ಮಠಾಧೀಶ ಶ್ರೀ ವಿಶ್ವೇಶ ತೀರ್ಥ ಶ್ರೀಪಾದಂಗಳವರು ಸಮಾಜದ ಎಲ್ಲರ ಆತ್ಮೋನ್ನತಿಗಾಗಿ ಧ್ವನಿಸುತ್ತಿರುವ ಸಂದೇಶದೊಡನೆ, ಆರ್ಥಿಕ ಉನ್ನತಿಯ ಯಜ್ಞವೊಂದರ ಪ್ರೇರಕರಾಗಲಿ. ಸಮಾಜದ ಏಕತೆಗಾಗಿ ಹರಿವ ಶಕ್ತಿ ಸರ್ವರೂ ಮಾನವರಂತೆ ಬಾಳಲು ಸಹಾಯಕವಾಗುವ ಪ್ರವಾಹವಾಗಿ ಭುಸುಗುಡುತ್ತಾ ಮುನ್ನುಗ್ಗಲಿ.

(ಕೃಪೆ : "ಸಂಗಾತಿ" ವಾರ ಪತ್ರಿಕೆ ಮಂಗಳೂರು, ಏ. 17ರ ಸಂಚಿಕೆ)

ಮೇ ದಿನಾಚರಣೆ

ವೀರಾಜಪೇಟೆ

ಮೇ ದಿನಾಚರಣೆಯ ಅಂಗವಾಗಿ ವೀರಾಜಪೇಟೆ ಮತ್ತು ಸಮೀಪದ ಆರಮೇರಿ ಗ್ರಾಮಗಳಲ್ಲಿ ಮೇ 1ರ ಮುಂಜಾನೆ ಪ್ರಭಾತಭೇರಿಯನ್ನು ನಡೆಸಲಾಯಿತು. ನಂತರ ವೀರಾಜಪೇಟೆಯಿಂದ ಸೈಕಲ್ ರ್‍ಯಾಲಿಯನ್ನು ನಡೆಸಲಾಯಿತು. ಆರಮೇರಿಯಲ್ಲಿ ಎ. ಕೆ. ಜಿ. ಸ್ಮಾರಕ ಕ್ಲಬ್ಬಿನ ವತಿಯಿಂದ ದಿ. 24-4-83ರಿಂದ ಆರಂಭಗೊಂಡಿದ್ದ ವಾಲಿಬಾಲ್ ಪಂದ್ಯಾಟದ ಅಂತಿಮ ಪಂದ್ಯ ಮೇ 1ರಂದು ನಡೆಯಿತು. ಪಂದ್ಯಾಟವನ್ನು ವೀಕ್ಷಿಸಲು ಸುಮಾರು 5 ಸಾವಿರ ಮಂದಿ ಸೇರಿದ್ದರೆಂದು ವರದಿ ತಿಳಿಸಿದೆ. ಸಾರ್ವಜನಿಕ ಉಪಯೋಗದ ಉದ್ದೇಶದಿಂದ ಸರಕಾರದ ಬಸ್ಸಿನ ವೇಳಾಪಟ್ಟಿಯ ಫಲಕವೊಂದನ್ನು DYFIನ ವೀರಾಜಪೇಟೆ ಶಾಖೆಯು ಮೇ 1ರಂದು ಬಸ್ ನಿಲ್ದಾಣಕ್ಕೆ ಕೊಡುಗೆಯಾಗಿ ನೀಡಿತೆಂದು ವರದಿಯಾಗಿದೆ.

ತುಮ್ಮಿನಕಟ್ಟೆ

ಮೇ ದಿನಾಚರಣೆಯ ಅಂಗವಾಗಿ ರಾಣೇಬೆನ್ನೂರು ತಾಲ್ಲೂಕು ತುಮ್ಮಿನಕಟ್ಟೆ ಗ್ರಾಮದಲ್ಲಿ ನೇಕಾರ ಕಾರ್ಮಿಕರೂ, ರೈತ-ಕೂಲಿಕಾರರೂ ಕೂಡಿ ಆಚರಿಸಿದರು. ರಾಣೇಬೆನ್ನೂರು ತಾಲ್ಲೂಕು ನೇಕಾರ ಕಾರ್ಮಿಕರ ಸಂಘದ ಎದುರಿನಲ್ಲಿ ಬೆಳಗ್ಗೆ 9 ಗಂಟೆಗೆ ಕೆಂಪು ಬಾವುಟವನ್ನು ಆರೋಹಣ ಮಾಡಲಾಯಿತು. ನಂತರ ಪ್ರಮುಖ ಬೀದಿಗಳಲ್ಲಿ ಕಾರ್ಲ್‌ಮಾರ್ಕ್ಸ್, ಲೆನಿನ್ನರ ಭಾವಚಿತ್ರಗಳೊಡನೆ ಮೆರವಣಿಗೆ ನಡೆಸಲಾಯಿತು. ಸಂಜೆ ನಡೆದ ಬಹಿರಂಗ ಸಭೆಯ ಅಧ್ಯಕ್ಷತೆಯನ್ನು ನೇಕಾರ ಮುಖಂಡರಾದ ಶ್ರೀ ಹನುಮಂತಪ್ಪ ಬುಳ್ಳಾಪುರ ಅವರು ವಹಿಸಿದ್ದರು.

ಸಭೆಯನ್ನುದ್ದೇಶಿಸಿ ಕಾ। ಎಸ್. ಎಫ್. ಕ್ಯಾದಗಿ, ಕಾ। ಜಗದೀಶ ಮಂಗಳೂರು ಮಠ, ಕಾ। ಸೈಯದ್ ಸಾಬ್, ಕಾ। ಫಕೀರಪ್ಪ ವಿಭೂತಿ ಮುಂತಾದವರು ಮಾತನಾಡಿದರು.

ಬೀದರ್

ದಿನಾಂಕ 1-5-83ರಂದು ಬೀದರ್‌ನಲ್ಲಿ ಸಮಾನ ವಿಚಾರದ ಬೇರೆ ಬೇರೆ ಕಾರ್ಮಿಕ ಸಂಘಟನೆಗಳು ಜಂಟಿಯಾಗಿ 'ಮೇ' ವಿಶ್ವ ಕಾರ್ಮಿಕ ದಿನಾಚರಣೆಯನ್ನು ಆಚರಿಸಿದರು. ಈ ತರದ ವಿಭಿನ್ನ ಸಂಘಟನೆಗಳು ಪ್ರಥಮ ಬಾರಿ ಒಂದೇ ಕಡೆ ಸೇರಿ ವಿಶ್ವ ಕಾರ್ಮಿಕ ದಿನಾಚರಣೆಯನ್ನು ಯಶಸ್ವಿಯಾಗಿ ಆಚರಿಸಿದರು. ಬೀದರ್ ಸಕ್ಕರೆ ಕಾರ್ಖಾನೆ, ಇಂಡಿಯನ್ ಬ್ರೆವೆರಿ, ಲೋಕೋಪಯೋಗಿ ಇಲಾಖೆ, ಖಾಂಡಸಾರಿ ಸಂಘ, ದಲಿತ ವರ್ಗದ ಕೃಷಿ ಕಾರ್ಮಿಕರು, ರೈತರು, ವಿದ್ಯಾರ್ಥಿ ಫೆಡರೇಷನ್, ಯುವಜನ ಫೆಡರೇಷನ್‌ನವರು ಭಾಗವಹಿಸಿದರು. ಸಮುದಾಯ ಸಾಂಸ್ಕೃತಿಕ ಸಂಘಟನೆಯ ಸದಸ್ಯರು ಸಕ್ರಿಯವಾಗಿ ಭಾಗವಹಿಸಿದರು.

ಸ್ಥಳೀಯ ಅಂಬೆಡ್ಕರ್ ಚೌಕದಿಂದ ಹೊರಟ ಈ ಮೆರವಣಿಗೆಯು ಮುಖ್ಯ ಮಾರ್ಗದ ಮುಖಾಂತರವಾಗಿ ಹೋಗಿ ಅತಿಥಿ ಗೃಹದ ಹೊರಾಂಗಣದಲ್ಲಿ ಸಾರ್ವಜನಿಕ ಸಭೆಯಲ್ಲಿ ಮುಕ್ತಾಯಗೊಂಡಿತು.

ಕಾ। ರಂಗನಾಥರಾವ್, ಸಾಯಗಾಂವಕರ, ಕಾ। ಸುಂದರರಾಜ, ಸಂಗ್ರಾಮ, ಬಸಿರೋದ್ದಿನ ಇವರು ಸಭೆಯನ್ನುದ್ದೇಶಿಸಿ ಮಾತನಾಡಿದರು. ಸಮುದಾಯದ ಕಲಾವಿದರು ಕ್ರಾಂತಿ ಗೀತೆಯನ್ನು ಹಾಡಿದರು. ಕಲ್ಯಾಣರಾವ್ ಮಾಳಕೇರಿಯವರು ಅಧ್ಯಕ್ಷತೆ ವಹಿಸಿದ್ದರು.

ಸಿರ್ಸಿ

ಸಿರ್ಸಿಯಲ್ಲಿ ಮೇ ದಿನವನ್ನು ದಿ. 2-5-1983ರಂದು ಸಂಜೆ ಆರು ಘಂಟೆಯಿಂದ ಎಂಟು ಘಂಟೆಯವರೆಗೆ ಸಾರ್ವಜನಿಕ ಸಭೆಯೊಂದಿಗೆ ಆಚರಿಸಲಾಯ್ತು. ಸಭಾಧ್ಯಕ್ಷತೆಯನ್ನು ಸಿರ್ಸಿ ತಾಲ್ಲೂಕು ಬಂಡಲ ಪಂಚಾಯ್ತಿ ಅಧ್ಯಕ್ಷರೂ, ತಾಲ್ಲೂಕಿನ ರೈತ ಪ್ರಮುಖರೂ ಆದ ನಾರಾಯಣ ಶಾನಭಾಗರು ವಹಿಸಿದ್ದರು. ನೆರೆದ ಸಹಸ್ರಾರು ಸಭಿಕರನ್ನುದ್ದೇಶಿಸಿ ನ್ಯಾಯವಾದಿ ಧಾರೇಶ್ವರರು ವಿಶ್ವಶಾಂತಿಗೆ ಧಕ್ಕೆ ತರುತ್ತಿರುವ ಅಮೆರಿಕನ್ ಸಾಮ್ರಾಜ್ಯಶಾಹಿಗಳನ್ನು ಮತ್ತು ದೇಶದಲ್ಲಿ ಅವರ ಹಿಂದೆ ಓಡುತ್ತಿರುವವರ ಕುತಂತ್ರಗಳನ್ನು ಬಯಲು ಮಾಡಿ ದುಡಿಮೆಗಾರ ವರ್ಗದ ಮೇಲಿರುವ ವಿಶ್ವಶಾಂತಿ ಕಾಪಾಡಿಕೊಂಡು ಬರುವ ಜವಾಬ್ದಾರಿಯನ್ನು ವಿವರಿಸಿ ದೇಶದಲ್ಲಿ ಕಚ್ಚಾಡುತ್ತಿರುವ ಬಂಡವಾಳಶಾಹಿಗಳ, ಪುಟ್ಟ ಬಂಡವಾಳಶಾಹಿಗಳ ಪಕ್ಷಗಳ ಕಿತ್ತಾಟವನ್ನು ವಿಶ್ಲೇಷಿಸಿದರು.

ಐಕ್ಯರಂಗ
ಪತ್ರಿಕೆಯನ್ನು ಓದಿ,
ನಿಮ್ಮ ಸ್ನೇಹಿತರನ್ನೂ
ಓದಿಸಿ.

ಉದ್ಘಾಟನೆ

ದಿನಾಂಕ 8-5-1983ರಲ್ಲಿ ಮೈಸೂರಿನಲ್ಲಿರುವ ವಾಸವಿ ನಿಲಯದಲ್ಲಿ ನಡೆದ **ಅಂಚೆ ಯೂನಿಯನ್**ನ ಸಮ್ಮೇಳನವನ್ನು ಜಿಲ್ಲಾ ಸಿ. ಐ. ಟಿ. ಯು.ನ ಅಧ್ಯಕ್ಷರಾದ ಕಾ॥ ಎಂ. ಎನ್. ಉಗ್ರಪ್ಪನವರು ಉದ್ಘಾಟಿಸಿದರು. ನಂತರ ಅಲ್ಲಿ ನೆರೆದಿದ್ದ ಕಾರ್ಮಿಕ ಜನಸ್ತೋಮವನ್ನು ಉದ್ದೇಶಿಸಿ ಈಗಿನ ದೇಶದ ಪರಿಸ್ಥಿತಿ, ಕಾರ್ಮಿಕರ ಸ್ಥಿತಿಗತಿಗಳು ಮತ್ತು ಅವರ ಐಕ್ಯತೆಯನ್ನು ವಿವರಿಸಿ, ರೈತರು, ಕಾರ್ಮಿಕರು ಶೋಷಣೆಯಿಂದ ಹೊರಬರಬೇಕೆಂದು ಕರೆಯಿತ್ತರು. ಬಲಿಷ್ಠವಾದ ನಿಮ್ಮ ಪೋಸ್ಟಲ್ ಯೂನಿಯನ್ ಕೂಡ ಐಕ್ಯತೆ ಮತ್ತು ವರ್ಗ ದೃಷ್ಟಿಕೋನದಿಂದ ಮುಂದುವರೆದು ತಮ್ಮ ಕುಂದುಕೊರತೆಗಳನ್ನು ನಿವಾರಿಸಿಕೊಳ್ಳಬೇಕೆಂದು ಕರೆಯಿತ್ತರು. ನಂತರ ಸಿ. ಐ. ಟಿ. ಯು.ನ ಪರವಾಗಿ ಸಮ್ಮೇಳನಕ್ಕೆ ಶುಭವನ್ನು ಕೋರಿದರು.

ನಂತರ ಕಾರ್ಮಿಕ ನಾಯಕರಾದ ಜಯರಾಂ, ಸಾವನೂರು, ರಾಮಸ್ವಾಮಿ, ಡಾ॥ ನರೇಂದ್ರಸಿಂಗ್ ಮತ್ತು ಇನ್ನಿತರ ನಾಯಕರು ಈ ಸಭೆಯನ್ನು ಉದ್ದೇಶಿಸಿ ಮಾತನಾಡಿದರು. ಸಭೆಯ ಅಧ್ಯಕ್ಷತೆಯನ್ನು ಕಾಮಲಕಾಂತ್ ಅವರು ವಹಿಸಿದ್ದರು.

ದೇಶ ಪರ್ಯಟನೆ

ಪ್ರಚಾರಕ್ಕಾಗಿ ಗ್ರಾಹಕರ ಕಿಸೆಗೆ ಕತ್ತರಿ

ದಿನ ಕಳೆದಂತೆ ಮನುಷ್ಯನ ಜೀವನ ಪದ್ಧತಿಯೂ ಬದಲಾಗುತ್ತಿದೆ. ಗ್ರಾಮಾಂತರ ಪ್ರದೇಶದಲ್ಲಿ ಬದಲಾವಣೆ ಸಾವಕಾಶವಾಗಿ ಆಗುತ್ತಿದ್ದರೆ, ನಗರಗಳಲ್ಲಿ ಅದರ ವೇಗ ತೀವ್ರವಾಗಿದೆ.

ಮಿತವ್ಯಯದಿಂದ ಮನೆಯಲ್ಲಿ ತಿಂಡಿ ತಿನ್ನಸುಗಳನ್ನು ಮಾಡುವುದು ಆರ್ಥಿಕ ದೃಷ್ಟಿಯಿಂದ ಹಿತಕರವಾಗಿದ್ದರೂ, ಪೇಟೆಯ ದಂಪತಿಗಳು ನಿತ್ಯ ಜೀವನದ ಅಗತ್ಯ ಆಹಾರಗಳನ್ನು ತಯಾರಿ ರೂಪದಲ್ಲಿಯೇ ಕೊಂಡುಕೊಳ್ಳುವ ಹವ್ಯಾಸಕ್ಕೆ ಬಲಿಯಾಗಿದ್ದಾರೆ. ಬಿಸ್ಕತ್ತು, ಬ್ರೆಡ್‌ಗಳನ್ನಷ್ಟೇ ಅವಲಂಬಿಸದೆ, ಪೌಷ್ಟಿಕಾಂಶವನ್ನೊದಗಿಸುವ ಆಹಾರ ವಸ್ತುಗಳಿಗೆ ಬೇಡಿಕೆ ಹೆಚ್ಚಾಗುತ್ತಿದೆ. ಅನ್ನ, ರೊಟ್ಟಿ, ಪಲ್ಯ, ಸಂಬಾರಗಳನ್ನು ತಯಾರಿಸಿ ಮಾರಾಟ ಮಾಡಿದರೆ ಅದನ್ನು ಕೊಂಡುಕೊಳ್ಳಲು ಸಾಲಾಗಿ ನಿಂತಿರುವ ಮಹಿಳೆಯರ ಸಂಖ್ಯೆ ಕಡಿಮೆಯಾಗಲಿಕ್ಕಿಲ್ಲ. ಮನೆಯಲ್ಲಿ ದುಡಿತಕ್ಕಿಂತ ತಯಾರಿ ವಸ್ತುಗಳಿಗೆ ಬೇಡಿಕೆ ಹೆಚ್ಚಾಗುತ್ತಿದೆ. ಜನರ ಈ ಮನೋಭಾವದ ಲಾಭವನ್ನು ಉತ್ಪಾದಕರು ಉಪಾಯದಿಂದ ಪಡೆಯುತ್ತಿದ್ದಾರೆ. ಅತ್ಯಂತ ಹರಿತವಾದ ಕತ್ತರಿಯನ್ನೇ ಅವರು ಉಪಯೋಗಿಸುತ್ತಿದ್ದಾರೆ. ಈ ರೀತಿ ಕತ್ತರಿಸುವುದು ಬಂಡವಾಳಶಾಹಿ ಸಮಾಜದಲ್ಲಿ ಒಂದು ಫ್ಯಾಶನ್ ಆಗಿಬಿಟ್ಟಿದೆ. ಇದರ ವಿರುದ್ಧ ಪ್ರತಿಭಟಿಸುವವರು ವಿರಳ.

ಸಿದ್ಧ ಆಹಾರ ವಸ್ತುಗಳನ್ನೂ, ಪೂರಕ ಆಹಾರ ಪದಾರ್ಥಗಳನ್ನೂ ಹೆಚ್ಚು ಹೆಚ್ಚಾಗಿ ಮಾರಲು, ಬಂಡವಾಳಶಾಹಿ ಸಮಾಜದಲ್ಲಿ ಭಾರಿ ಜಾಹಿರಾತು ಮಾಡುತ್ತಾರೆ. ರಶ್ಯಾ-ಚೀನಾದಂಥ ಸಮಾಜವಾದಿ ದೇಶಗಳಲ್ಲಿ ಈ ರೀತಿ ಜಾಹಿರಾತುಗಳು ಕಾಣಬರುವುದಿಲ್ಲ. ಸರಕಾರವೇ ಉತ್ಪಾದನೆ ಮಾಡುವುದರಿಂದ, ಜನರೇ ಆ ಕಾರಕಾನೆಯ ಮಾಲಕರಾಗಿರುವುದರಿಂದ, ಉತ್ಪಾದನೆಯಾಗುವ ವಸ್ತುಗಳ ಪರಿಚಯ ಜನರಿಗಿರುವುದರಿಂದ ಜಾಹಿರಾತಿನ ಪ್ರಶ್ನೆ ಉದ್ಭವಿಸುವುದಿಲ್ಲ.

ಗುಣ ಮಟ್ಟ ಹೇಗೇ ಇರಲಿ ಭಾರಿ ಜಾಹಿರಾತು ಮಾಡಿದರೆ ಕೆಲವು ಕಾಲ ಆ ವಸ್ತು ಹೆಚ್ಚು ಮಾರಾಟವಾಗುತ್ತದೆ. ಆದರೆ ಅದರ ಗುಣಮಟ್ಟ ಕೆಟ್ಟರೆ, ಮತ್ತೊಂದು ವಸ್ತು ಉಪಯೋಗಿಸಲು ಗ್ರಾಹಕರು ಹಿಂಜರಿಯುವುದಿಲ್ಲ. ಆದರೆ ತಯಾರಿಸಿದ ಆಹಾರ ಉತ್ಪನ್ನದಲ್ಲಿ ತಯಾರಕರಿಗೆ ಅಪಾರ ಲಾಭ ಸಿಗುತ್ತದೆ. ಉದಾಹರಣೆಗೆ ಹದಿನೆಂಟು ರೂ. ತೆತ್ತು ಬೆಳೆಗಾರನಿಂದ ಕೊಂಡ ಸೇಬಿನಿಂದ ತಯಾರಿಸಿದ ಹಣ್ಣಿನ ರಸದ ಡಬ್ಬಗಳ ಅಂತಿಮ ಬೆಲೆ ರೂ. 198 ಆಗುತ್ತದೆ. ಅದರಲ್ಲಿ ತೆರಿಗೆ ಸುಂಕ ರೂ. 85, ಡಬ್ಬಕ್ಕೆ ಖರ್ಚು ರೂ. 62, ಲಾಭ ರೂ. 51.

ಒಂದು ಟನ್ ಬಿಸ್ಕತ್ತಿನ ಮಾರುಕಟ್ಟೆ ಬೆಲೆ ರೂ. 15000. ಹಿಟ್ಟನ್ನು ಬಿಸ್ಕತ್ತಾಗಿ ರೂಪಾಂತರಿಸಲು ಬೀಳುತ್ತಿದ್ದ ವೆಚ್ಚ ಕೇವಲ ರೂ. 1673, ತೆರಿಗೆ, ಸುಂಕಗಳೆಲ್ಲ ಸೇರಿ ಶೇ. 100 ರಷ್ಟು ಮಾತ್ರ. ತಯಾರಕರ ಲಾಭ ಟನ್ನಿಗೆ ರೂ. 238 ಅಷ್ಟೆ. ಈ ಮಾಹಿತಿ ನೀಡಿದವರು ಕೇಂದ್ರ ಆಹಾರ ಸಂಶೋಧನಾಲಯದ ನಿರ್ದೇಶಕ ಡಾ. ಅಮ್ಲ ಅವರು. ಅವರ ಹೇಳಿಕೆ ಪ್ರಕಾರ ತಯಾರಿಕೆ ಮತ್ತು ತಂತ್ರಜ್ಞಾನಕ್ಕೆ ಆಗುವ ವೆಚ್ಚ ಒಟ್ಟು ಉತ್ಪನ್ನದ ಮೌಲ್ಯದ ಒಂದು ಸಣ್ಣ ಅಂಶ ಮಾತ್ರ, ಆದರೆ ಸರಕಾರ ಅತಿ ಹೆಚ್ಚು ಗಳಿಸುತ್ತದೆ.

ತಮ್ಮ ವಸ್ತುಗಳನ್ನು ಆದಷ್ಟು ಬೇಗ ಮಾರಾಟಮಾಡಬೇಕೆಂಬ ಉದ್ದೇಶದಿಂದ ಉತ್ಪಾದಕರು ಜಾಹಿರಾತಿಗೆ ಹೆಚ್ಚು ಹಣ ಖರ್ಚು ಮಾಡುತ್ತಾರೆ. ಸರಕಾರ ಸುಂಕ ಏರಿಸುತ್ತಿದ್ದಂತೆಯೇ ಜಾಹಿರಾತಿನ ಖರ್ಚು ಹೆಚ್ಚಾಗುತ್ತದೆ. ಇದರಿಂದಾಗಿ ಬೆಳೆಗಾರ ಮತ್ತು ಬಳಕೆಗಾರರಿಗೆ ಅಪಾರ ಹಾನಿಯಾಗುತ್ತದೆ. ಸರಕಾರದ ಮತ್ತು ಉತ್ಪಾದಕರ ನೀತಿಯಿಂದಾಗಿ ಗ್ರಾಹಕರಿಗೆ ದುಬಾರಿಯಾಗಿ ವಸ್ತುಗಳನ್ನು ಮಾರಾಟ ಮಾಡುತ್ತಾರೆ, ಬೆಳೆಗಾರನಿಂದ ಅಗ್ಗ ದರದಲ್ಲಿ ಕೊಂಡುಕೊಳ್ಳುತ್ತಾರೆ, ಬಂಡವಾಳಶಾಹಿ ಆರ್ಥಿಕ ನೀತಿಯಿಂದ ಇವರಿಬ್ಬರ ಸುಲಿಗೆಯಾಗುತ್ತಿದೆ.

ಎನ್ಕೆ

ರೈಲ್ವೆ ದುರವಸ್ಥೆ

ಸದರನ್ ರೈಲ್ವೆಗಳಲ್ಲಿ ಪ್ರಯಾಣಿಕರ ಸಂಖ್ಯೆ 1970-71ರಲ್ಲಿ 1,219 ದಶಲಕ್ಷ ಇದ್ದುದು 1981-82ರಲ್ಲಿ 2,064 ದಶಲಕ್ಷಕ್ಕೇರಿದೆ. (ಶೇ.69.3 ರಷ್ಟು) ಆದರೆ ಕೋಚ್‌ಗಳ ಸಂಖ್ಯೆ ಈ ಅವಧಿಯಲ್ಲಿ ಶೇ. 52ರಷ್ಟು ಮತ್ತು ಸ್ಥಳಾವಕಾಶ ಶೇ. 51.1 ರಷ್ಟು ಮಾತ್ರ. ಅದೇ ರೀತಿ ಇತರ ರೇಲುಗಳಲ್ಲಿ ಪ್ರಯಾಣಿಕರ ಸಂಖ್ಯೆ 1,212 ದಶಲಕ್ಷದಿಂದ 1,640 ದಶಲಕ್ಷಕ್ಕೆ (ಶೇ. 35.3ರಷ್ಟು) ಏರಿದ್ದರೂ ಸಾಂಪ್ರದಾಯಿಕ ಕೋಚುಗಳ ಸಂಖ್ಯೆ ಶೇ. 10.5ರಷ್ಟು ಮತ್ತು ಸ್ಥಳಾವಕಾಶ ಶೇ. 12ರಷ್ಟು ಮಾತ್ರ ಏರಿದೆ. ಅಂದರೆ, ಈ ಅವಧಿಯಲ್ಲಿ ಕೋಚುಗಳ ಸಂಖ್ಯೆ ಮತ್ತು ಸ್ಥಳಾವಕಾಶ ಪ್ರಯಾಣಿಕರ ಸಂಖ್ಯೆಗೆ ಅನುಗುಣವಾಗಿ ಏರದಿದ್ದುದರಿಂದ ನೂಕುನುಗ್ಗಲಿಕ್ಕೆ ಕಾರಣವಾಗಿದೆಯೆಂದು ಹೇಳಿದವರು ಏರ್‌ಕಂಡೀಶನ್ ಸ್ಪೆಶಲ್ ಕೋಚುಗಳಲ್ಲಿ ಪ್ರಯಾಣ ಮಾಡುವ ಮಂತ್ರಿಗಳಾಗಲೀ, ಅಧಿಕಾರಿಗಳಾಗಲೀ ಅಲ್ಲ, ಸಾರ್ವಜನಿಕ ಲೆಕ್ಕಪತ್ರ ಸಮಿತಿಯವರು.

ಆಹಾರ ಧಾನ್ಯಗಳ ಬೆಲೆಯಲ್ಲಿ ಏರಿಕೆ

ಕೇಂದ್ರ ಸರಕಾರ ಗೋಧಿ, ರವೆ, ಮೈದಾಗಳ ಬೆಲೆ ಹೆಚ್ಚಿಸಿದೆ. ಕಾರಣ ಕರ್ನಾಟಕ ರಾಜ್ಯದಲ್ಲೂ ಪರಿಷ್ಕೃತ ಬೆಲೆಗಳಲ್ಲಿ ಇವುಗಳನ್ನು ಮಾರಾಟ ಮಾಡಲಾಗುವುದು.

ಬೆಲೆಯೇರಿಕೆಗೆಲ್ಲ ಹಿಂದಿನ ಜನತಾ ಸರ್ಕಾರವೇ ಕಾರಣವೆಂದು ಬೊಬ್ಬೆಹೊಡೆಯುತ್ತಿದ್ದ ಇಂದಿರಾಗಾಂಧಿ ಕಳೆದ ಎರಡು ವರ್ಷಗಳಲ್ಲಿ ಅದರಲ್ಲೂ ಈ ವರ್ಷ ಅತ್ಯಾವಶ್ಯಕ ವಸ್ತುಗಳ, ಆಹಾರ ಧಾನ್ಯ, ಚಿಮಣಿಎಣ್ಣೆಗಳ ಬೆಲೆ ಏರಿಕೆಗೆ ಜನತಾ ಸರಕಾರದ ಜೊತೆಯಲ್ಲಿ ಜಗತ್ತಿನ ಇತರ ದೇಶಗಳತ್ತ ಬೊಟ್ಟುಮಾಡಿ ತೋರಿಸಲು ಪ್ರಾರಂಭಿಸಿದ್ದಾರೆ. ಆದರೆ ಬೆಲೆ ಏರಿಕೆಯೆಂಬ ಸಮಸ್ಯೆಯನ್ನೇ ಕಾಣದ ಸಮತಾವಾದಿ ದೇಶಗಳತ್ತ ಬೊಟ್ಟುಮಾಡುವ ಧೈರ್ಯ ಇಂದಿರಾಗಾಂಧಿಗಿಲ್ಲ.

ಆಹಾರ ಉತ್ಪಾದನೆಗಳಲ್ಲಿ ಸ್ವಾವಲಂಬಿಗಳಾಗುತ್ತೇವೆಂಬ ಮಂತ್ರವನ್ನಷ್ಟೇ ಇಂದಿರಾಗಾಂಧಿ ಪಠಿಸುತ್ತಿದ್ದಾರಲ್ಲದೆ ಆಹಾರ ಉತ್ಪಾದನೆಯಲ್ಲಿ ರಾಜ್ಯಗಳ ಜನತೆ ಎದುರಿಸುತ್ತಿರುವ ಸಮಸ್ಯೆಗಳತ್ತ ಗಮನ ಹರಿಸಿ, ಅವುಗಳ ನಿವಾರಣೋಪಾಯ ಕಂಡುಹಿಡಿಯುವಲ್ಲಿ ಇಂದಿರಾ ಸರಕಾರ ಹಿಂದೆ ಬಿದ್ದಿದೆಯೆಂಬ ಸಂಗತಿ ಸ್ಪಷ್ಟವಾಗಿದೆ. ಅತಿ ಮಳೆ ಒಂದೆಡೆಯಾದರೆ, ಅಭಾವ ಪರಿಸ್ಥಿತಿ ಮತ್ತೊಂದೆಡೆ. ಹೋದ ವರ್ಷ 7.9 ಕೋಟಿ ಟನ್ ಖರೀಫ್ ಬೆಳೆ ಬೆಳೆದಿತ್ತು. ಈ ವರ್ಷ ಒಂದು ಲಕ್ಷ ಟನ್ ಕಡಿಮೆಯಾಗಿದೆ. ಈ ನಷ್ಟವನ್ನು ತುಂಬಿಕೊಳ್ಳಲು ರಬಿ ಫಸಲನ್ನು 6.2ಕೋಟಿ ಟನ್‌ಗೆ ಹೆಚ್ಚಿಸುವ ಗುರಿಯನಿಟ್ಟುಕೊಂಡಿತ್ತು. ಅದೂ ಸಾಧ್ಯವಾಗಲಿಲ್ಲ. ಹೋದ ತಿಂಗಳ ಮಳೆಯಿಂದಾಗಿ ಗೋಧಿ ಬೆಳೆಗೆ ಹಾನಿ ಉಂಟಾಯಿತು. ಹಲವಾರು ರಾಜ್ಯಗಳಲ್ಲಿ ಬರದ ಬೇಗೆ. ಕರ್ನಾಟಕ ರಾಜ್ಯದಲ್ಲಿ 21.67 ಲಕ್ಷ ಹೆಕ್ಟೇರುಗಳಷ್ಟು ಭೂಮಿಯಲ್ಲಿ ಸಾಗುವಳಿ ಆಗಲಿಲ್ಲ. ಇಡೀ ದೇಶದಲ್ಲಿ 82–83ರಲ್ಲಿ 4.2 ಕೋಟಿ ಹೆಕ್ಟಾರುಗಳಿಗೂ ಹೆಚ್ಚು ಭೂಮಿ ಅನಾವೃಷ್ಟಿಗೆ ತುತ್ತಾಗಿದೆಯಂತೆ. 50 ಲಕ್ಷ ಹೆಕ್ಟಾರು ಸಾಗುವಳಿ ನೆಲ ಪ್ರವಾಹಕ್ಕೆ ತುತ್ತಾಗಿದೆ. ಈ ವರ್ಷ ಒಟ್ಟು 12.68 ಕೋಟಿ ಟನ್‌ಗಳಿಗಿಂತ ಅಧಿಕ ಉತ್ಪತ್ತಿ ಆಗಲಾರದೆಂದು ಅಂದಾಜು ಮಾಡಿದ್ದಾರೆ.

ಹಸಿರುಕ್ರಾಂತಿಯಾಗಲೀ, ಒಣ ಬೇಸಾಯದಲ್ಲಿ ಪ್ರಗತಿಯಾಗಲೀ ನಾವು ಹೇಳಿಕೊಳ್ಳುವಷ್ಟು ಯಶಸ್ವಿಯಾಗಿಲ್ಲ. ಹೀಗಾಗಿ ಕೃಷಿಯಲ್ಲಿ ಏನೂ ಪ್ರಗತಿ ಇಲ್ಲ. ಆದ್ದರಿಂದಲೇ ಬೆಲೆಗಳು ಕೈಮೀರಿ ಹೆಚ್ಚಾಗುತ್ತಿವೆ. ಸಗಟು ಬೆಲೆ ಪುಟಿಯತೊಡಗಿದೆ. ಚಿಲ್ಲರೆ ಬೆಲೆ ಹೇಳಿಕೊಳ್ಳುವಂತಿಲ್ಲ. ಆಕಾಶದತ್ತಲೇ ಮುಂದೆ ಸಾಗಿದೆ.

ಸರಕಾರಿ ಗೋದಾಮುಗಳಲ್ಲಿ ಸಂಗ್ರಹವೂ ಅಸಮರ್ಪಕ. ಲೋಕಸಭೆಯಲ್ಲಿ ಮಂತ್ರಿಗಳ ಹೇಳಿಕೆಗಳಿಗೂ ನಿಜವಾದ ವಾಸ್ತವ ಪರಿಸ್ಥಿತಿಗೂ ಸಂಬಂಧವೇ ಇಲ್ಲದಂತಾಗಿದೆ. ಸಾರ್ವಜನಿಕ ವಿತರಣಾ ವ್ಯವಸ್ಥೆಯನ್ನು ಇನ್ನೂ ವಿಶಾಲಗೊಳಿಸಲಾಗುವುದೆಂದೂ, ಹೆಚ್ಚು ಅಗ್ಗದರದ ಅಂಗಡಿಗಳನ್ನು ತೆರೆಯಲಾಗುವುದೆಂದೂ ಲೋಕಸಭೆಯಲ್ಲಿ ಆಶ್ವಾಸನೆ ನೀಡಲಾಯಿತು. ಆದರೆ ಸರಕಾರಿ ಗೋದಾಮುಗಳಲ್ಲಿ ಸಾಕಷ್ಟು ಸಂಗ್ರಹ ಇಲ್ಲದಿರುವುದರಿಂದಾಗಿ ಈಗಿರುವ ಅಂಗಡಿಗಳಿಗೂ ಸಾಕಾಗುವಷ್ಟು ಧಾನ್ಯ ಒದಗಿಸಲಾರದಾಗಿದೆ. ಸರಕಾರಕ್ಕೆ ಇದರ ಜೊತೆಯಲ್ಲೇ ಅಂತರಾಷ್ಟ್ರೀಯ ಹಣಕಾಸು ಸಂಸ್ಥೆಯ ಆದೇಶಕ್ಕನುಸಾರ ಸಾಗುವಳಿಗೆ ಬೇಕಾಗುವ ವಸ್ತುಗಳ ಬೆಲೆ ಹೆಚ್ಚಿಸಿರುವುದಲ್ಲದೆ, ಅಸಮರ್ಪಕ ಆರ್ಥಿಕ ನೀತಿ ಪೇಟೆಯನ್ನು ಠೋಕ ವ್ಯಾಪಾರಸ್ಥರ, ಕಳ್ಳಸಂತೆ ಖೋರರ ವಶಪಡಿಸುವ ನೀತಿಯಿಂದಾಗಿ ಆಹಾರ ಧಾನ್ಯಗಳ ಬೆಲೆ ಕೂಡ ದಿನ ನಿತ್ಯ ಗಗನಕ್ಕೇರುತ್ತಿದೆ. ಗ್ರಾಹಕನ ಸುಲಿಗೆಗೆ ಸರಕಾರವೇ ನೇರ ಕಾರಣಭೂತವಾಗಿದೆ; ಜೊತೆಯಲ್ಲಿ ಸಗಟು ವ್ಯಾಪಾರಿಗಳಿಗೂ ಸುಲಿಗೆಗಾಗಿ ಮುಕ್ತದ್ವಾರ ತೆರೆದಿಡಲಾಗಿದೆ. ಸರಕಾರದ ಈ ನೀತಿ ವಿರುದ್ಧ ಸಂಘಟಿತ ಹೋರಾಟ ಅಗತ್ಯ.

ಆಳುವ ಪಕ್ಷದ ಸ್ಥಿತಿಗತಿ

ಪ್ರತಿಯೊಂದು ಕ್ಷೇತ್ರದಲ್ಲೂ ಗಂಭೀರ ಪರಿಸ್ಥಿತಿಯನ್ನು ನಾವು ಸಮಕ್ಷಮ ನೋಡುತ್ತಿರುವಾಗ ಒಂದೆಡೆ ಬರಗಾಲದ ಬವಣೆ, ನೀರಿಗಾಗಿ ಹಾಹಾಕಾರ ಮತ್ತೊಂದೆಡೆ ದೇಶದ ಐಕ್ಯತೆ, ಸಾರ್ವಭೌಮತ್ವಕ್ಕೆ ಕೊಡಲಿಯೇಟು ಹಾಕುವಂಥ ಪಂಜಾಬ್–ಅಸ್ಸಾಂ ಸಮಸ್ಯೆಗಳು—ಹೀಗೆ ಇಡೀ ದೇಶ ಗಂಭೀರ, ಗಂಡಾಂತರಕಾರಿ ಸಮಸ್ಯೆಗಳನ್ನು ಎದುರಿಸುತ್ತಿರುವಾಗ, ಇವುಗಳೆಲ್ಲ ಗೌಣವೆಂದು ತಿಳಿದು, ಗುಂಪುಗಾರಿಕೆ, ಅಧಿಕಾರವೇ ಪ್ರಾಧಾನ್ಯವೆಂಬ ತಪ್ಪು ತಿಳುವಳಿಕೆಯಿಂದ ಆಳುವ ಇಂದಿರಾ ಕಾಂಗ್ರೆಸ್ ಕೀಳ್ಮಟ್ಟದ ಗುಂಪು ರಾಜಕಾರಣದಲ್ಲಿ ತೊಡಗಿರುವುದನ್ನು ನೋಡುವಾಗ ಆಶ್ಚರ್ಯವಾಗುತ್ತದೆ.

ತ್ಯಾಗ ಬಲಿದಾನಗಳ ಮೂಲಕ ಗಳಿಸಿದ, ಉಳಿಸಿಕೊಂಡ ದೇಶದ ಒಗ್ಗಟ್ಟು ಗಂಡಾಂತರದಲ್ಲಿದೆ. ದೇಶವನ್ನು ಒಡೆಯುವುದರಲ್ಲಿ ಅಮೇರಿಕದ ಸಾಮ್ರಾಜ್ಯಶಾಹಿಗಳು ಬಹಿರಂಗವಾಗಿಯೇ ವರ್ತಿಸುತ್ತಿದ್ದಾರೆ. ಅಸ್ಸಾಂ ಛಿದ್ರಕಾರಿಗಳ ಬೆಂಕಿಗೆ ಆಹುತಿಯಾಗುತ್ತಿದೆ. ಪಂಜಾಬ್ ಪ್ರತ್ಯೇಕವಾದಿಗಳ ಮತ್ತೊಂದು ಕಣವಾಗುತ್ತಿದೆ.

ಅತ್ಯಂತ ಕಠಿಣ ಆರ್ಥಿಕ ಪರಿಸ್ಥಿತಿಯನ್ನು ದೇಶ ಎದುರಿಸುತ್ತಿದೆ. ಹಿಂದೆಂದಿಗೂ ಎದುರಿಸದಿದ್ದಂತ ಬರಗಾಲ ಪರಿಸ್ಥಿತಿ ಹೆಚ್ಚಿನ ರಾಜ್ಯಗಳನ್ನಾವರಿಸಿದೆ. ಇಂಥ ಪರಿಸ್ಥಿತಿಯಲ್ಲಿ ಗಂಭೀರವಾಗಿ ಚಿಂತನೆ ಮಾಡುವ ಯಾವುದೇ ಒಂದು ರಾಜಕೀಯ ಪಕ್ಷ, ಆಡಳಿತೆಯ ಜವಾಬ್ದಾರಿ ಇರುವ ಪಕ್ಷ, ತನ್ನೆಲ್ಲ ಶಕ್ತಿಯನ್ನು ಕ್ರೋಢೀಕರಿಸಿ ದೇಶದ ಜನತೆಯ ರಕ್ಷಣೆಗೆ ಮುಂದಾಗುತ್ತಿತ್ತು. ಛಿದ್ರಕಾರಿ ಶಕ್ತಿಗಳ ವಿರುದ್ಧ ಹೋರಾಡಲು ತನ್ನ ಶಕ್ತಿಯನ್ನೆಲ್ಲ ಉಪಯೋಗಿಸುತ್ತಿತ್ತು. ಆದರೆ ಇಂದಿರಾ ಕಾಂಗ್ರೆಸ್ ಮಾತ್ರ ಈ ಸಮಸ್ಯೆಗಳನ್ನೆದುರಿಸಲು ಏನು ಮಾಡುತ್ತಿದೆ ಗೊತ್ತೇ? ಆ ಪಕ್ಷದ ಮುಖಂಡರು ಶಾಸಕರು ಮತ್ತು ಮಂತ್ರಿಗಳೆಲ್ಲ ತಮ್ಮ ಗುಂಪುಗಾರಿಕೆಯನ್ನು ಕೊನೆ ಅಂಚಿಗೆ ಒಯ್ಯುವುದರಲ್ಲಿ ತಲ್ಲೀನರಾಗಿದ್ದಾರೆ. ಜನರ ಸಂಕಷ್ಟವಾಗಲೀ, ಸಾಮ್ರಾಜ್ಯಶಾಹಿಗಳ ಒಳಸಂಚಾಗಲೀ ಅವರ ಕಣ್ಣಿಗೆ ಕಾಣಿಸುವುದೇ ಇಲ್ಲ. ಅಧಿಕಾರದ ಗದ್ದುಗೆಯನ್ನೇರುವುದೇ ಅವರ ಪರಮೋದ್ದೇಶವಾಗಿದೆ.

ಬಿಹಾರ, ರಾಜಸ್ಥಾನ, ಮಧ್ಯಪ್ರದೇಶ, ಒರಿಸ್ಸಾ, ಮಹಾರಾಷ್ಟ್ರ ಮುಂತಾದ ರಾಜ್ಯಗಳಲ್ಲಿ ಇಂದಿರಾ ಕಾಂಗ್ರೆಸ್ಸಿನವರು, ದೇಶದಲ್ಲಿ ಜನತೆ ಎದುರಿಸುತ್ತಿರುವ ಸಂಕಷ್ಟಗಳೆಡೆಗೆ ಗಮನಹರಿಸುವುದನ್ನು ಬಿಟ್ಟು ತಮ್ಮೊಳಗಿನ ಕಚ್ಚಾಟ ತೀವ್ರಗೊಳಿಸಿದ್ದಾರೆ. ಇಂದಿರಾ ಕಾಂಗ್ರೆಸ್ ಬಿಟ್ಟರೆ ತಮಗೆ ಅಧಿಕಾರ ಸಿಗುವುದಿಲ್ಲವೆಂಬ ಒಂದೇ ಕಾರಣದಿಂದ ಮಾತ್ರ ಕಾಂಗ್ರೆ ಬಿಟ್ಟು ಅವರು ಹೊರಗೆ ಬರುತ್ತಿಲ್ಲ. ಮಹಾರಾಷ್ಟ್ರದಲ್ಲಿ ಶಿಕ್ಷಣ ಮತ್ತು ಕಾರ್ಮಿಕ ಮಂತ್ರಿಗಳ ನಡುವಿನ ಜಗಳ ಮುಖ್ಯಮಂತ್ರಿ ಪಾಟೀಲ, ಉಪಮುಖ್ಯಮಂತ್ರಿ ರಾಮರಾವ್ ಆಧಿಕ್

(5ನೇ ಪುಟ ನೋಡಿ)

ಆಳುವ ಪಕ್ಷದ ಸ್ಥಿತಿಗತಿ

(4ನೇ ಪುಟದಿಂದ)

ಅವರನ್ನು ಸೇರಿಸಿಕೊಂಡು ಪೋಲೀಸ್ ಪಾರ್ಟಿ ಮಧ್ಯ ಪ್ರವೇಶಿಸುವ ಮಟ್ಟಿಗೆ ಮುಂದುವರಿಯಿತು. ಅಂತುಳಿ ಗುಂಪು ಬಲಿಷ್ಟವಾಗಿದ್ದು ರಾಜ್ಯ ಕಾಂಗ್ರೆಯ ಅಧ್ಯಕ್ಷ ಪದವಿ ಈ ಗುಂಪಿಗೆ ದಕ್ಕಿದ್ದರಿಂದ ಮಂತ್ರಿಮಂಡಲ ಡೋಲಾಯಮಾನವಾಗಿದೆ.

ರಾಜ್ಯವನ್ನೂ, ಜನರ ಐಕ್ಯತೆಯನ್ನೂ ಕಾಪಾಡಲು ಪಂಜಾಬಿನ ಕಾಂಗ್ರೈ ಶಾಸಕರು ಪ್ರಯತ್ನಿಸದೆ, ದರ್ಬಾರ್‌ಸಿಂಗ್ ಮಂತ್ರಿಮಂಡಲವನ್ನು ಉರುಳಿಸುವ ದುರುದ್ದೇಶದಿಂದ ಬೆಂಕಿಗೆ ಆಹುತಿಯಾದ ಪಂಜಾಬನ್ನು ಬಿಟ್ಟುಕೊಟ್ಟು ದೆಹಲಿ ಸೇರಿದ್ದಾರೆ. ಇಂದಿರಾಗಾಂಧಿ, ರಾಜೀವ್ ಗಾಂಧಿಯವರು ಪಂಜಾಬಿನಲ್ಲಿ ನಡೆಯುತ್ತಿರುವ ಚಳುವಳಿಯ ಗಾಂಭೀರ್ಯತೆಯನ್ನು ಅರ್ಥ ಮಾಡಿಕೊಳ್ಳದೆ ಭಿನ್ನ ಮತೀಯರಾಗಿ ಬೆಂಬಲ ನೀಡುತ್ತಿರುವುದು ಅತ್ಯಂತ ನಾಚಿಕೆಗೇಡು. ಒಂದು ರಾಜ್ಯದಲ್ಲಿ ಹೆಚ್ಚು ಬೆಂಬಲ ಪಡೆದಿರುವ ಮುಖಂಡ ಮುಂದೆ ಬರುವುದು ತನ್ನ ಮುಖಂಡತ್ವಕ್ಕೆ ಅಪಾಯಕಾರಿ ಎಂದು ತಿಳಿದ ಇಂದಿರಾ ಗಾಂಧಿ ಇಂಥ ಭಿನ್ನಮತೀಯರಿಗೆ ಪ್ರೋತ್ಸಾಹ ನೀಡುತ್ತಿದ್ದಾರೆ.

ಭಾರತದ ಜನರಲ್ಲಿ ಒಂದು ಗುಂಪನ್ನು ಮತ್ತೊಂದು ಗುಂಪಿನ ವಿರುದ್ಧ ಎತ್ತಿ ಕಟ್ಟಿ ಬ್ರಿಟಿಷರು ರಾಜ್ಯ ಆಳಿದ್ದರು. ಈಗ ಇಂದಿರಾಗಾಂಧಿ ತನ್ನ ಪಕ್ಷದ ಒಂದು ಗುಂಪನ್ನು ಮತ್ತೊಂದು ಗುಂಪಿನ ವಿರುದ್ಧ ಎತ್ತಿ ಕಟ್ಟಿ ರಾಜ್ಯ ಆಳುತ್ತಿದ್ದಾರೆ. ಇವರು ನೌಕರ ಶಾಹಿಗಳನ್ನೇ ಅವಲಂಬಿಸುತ್ತಿರುವುದರಿಂದ ಪಂಜಾಬಿ, ಅಸ್ಸಾಂನಂತ ಸಮಸ್ಯೆಗಳು ಪರಿಹಾರ ಕಂಡಿಲ್ಲ.

"ಬಂಡವಾಳಶಾಹಿ ಭೂಮಾಲಕ ವರ್ಗದ ಪಾರ್ಟಿಗಳು ಭಿನ್ನಮತೀಯರಿಂದ ತುಂಬಿದ್ದರಿಂಡ, ತಮ್ಮ ಐಕ್ಯತೆಯನ್ನು ಕಾಪಾಡಿಕೊಳ್ಳುವಲ್ಲಿ ವಿಫಲಗೊಂಡಿವೆ. ಭ್ರಷ್ಟಾಚಾರ, ಮಾನಭಂಗ, ಮೋಸಗಾರಿಕೆಗಳೆಲ್ಲ ಮೇಲ್ಮಟ್ಟದಲ್ಲೇ ನಡೆಯುತ್ತಿರುವ ಕತೆಗಳೆಲ್ಲ ಬಂಡವಾಳಶಾಹಿ ಪಕ್ಷ ಹಾಗೂ ಸಮಾಜವನ್ನು ಒಟ್ಟಾಗಿ ಇಟ್ಟುಕೊಳ್ಳುವ ನೀತಿ ಯಾವ ರೀತಿ ನಾಶವಾಗಿದೆಂಬುದನ್ನು ತೋರ್ಪಡಿಸುತ್ತದೆ." ಎಂದು ಜಲಂದರದಲ್ಲಿ ಸೇರಿದ್ದ ಮಾರ್ಕ್ಸ್‌ವಾದಿ ಕಮ್ಯೂನಿಸ್ಟ್ ಪಾರ್ಟಿಯ ಹತ್ತನೇ ಸಮ್ಮೇಳನದ ರಾಜಕೀಯ ನಿರ್ಣಯ ಸ್ಪಷ್ಟಪಡಿಸಿದೆ.

ಇಂದಿರಾ ಕಾಂಗ್ರೆಸ್ಸು ಈ ರೀತಿ ಅಂತರಿಕ ಜಗಳದಲ್ಲಿ ತಲ್ಲೀನವಾಗಿರುವಾಗ ಇತರ ಬಂಡವಾಳಶಾಹಿ ರಾಜಕೀಯ ಪಕ್ಷಗಳು ಏನು ಮಾಡುತ್ತಿವೆ ? ಯಾರ‍್ಯಾರನ್ನು ಸೇರಿಸಿಕೊಂಡರೆ ಮುಂಬರುವ ಚುನಾವಣೆಯಲ್ಲಿ ತಾವು ಅಧಿಕಾರಕ್ಕೆ ಬರಬಹುದೆಂಬ ಯೋಚನೆಯಲ್ಲಿ ಈ ಪಕ್ಷಗಳಿವೆ.

ಎಡ ಹಾಗೂ ಕಮ್ಯುನಿಸ್ಟ್ ಪಾರ್ಟಿಗಳನ್ನು ಬಿಟ್ಟು, ಇತರೆ ಪಕ್ಷಗಳೊಡನೆ ಸಂಯುಕ್ತರಂಗ ರಚಿಸುವ ಮಾತುಗಳನ್ನಾಡುತ್ತಿದೆ ಭಾರತೀಯ ಜನತಾ ಪಾರ್ಟಿ ಜಗಜೀವನ ರಾಂ ಜೊತೆ ಸೇರಿ ತಂತ್ರ ಹೂಡುವ ಯೋಜನೆಯಲ್ಲಿದ್ದಾರೆ ಚರಣಸಿಂಗ್ ಪರಿಸ್ಥಿತಿಯ ವಾಸ್ತವಿಕತೆಯನ್ನರಿಯದೆ ಹೇಗಾದರೂ ಮಾಡಿ ಚುನಾವಣಾ ಒಪ್ಪಂದ ಮಾಡಿಕೊಂಡು ಪಟ್ಟಾಭಿಷೇಕ ಮಾಡಿಕೊಳ್ಳುವ ಕನಸುಕಾಣುತ್ತಿವೆ. ಜನತಾ, ಕಾಂಗ್ರೆಸ್ (ಎಸ್) ಡಿ. ಎಸ್. ಪಿ. ಗಳಂತ ಪಕ್ಷಗಳು. ಜನರೆದುರಿಸುತ್ತಿರುವ ಸಮಸ್ಯೆಗಳನ್ನು ಅರಿತುಕೊಂಡು, ಸಿಪಿಐ(ಎಂ), ಸಿಪಿಐ ಮತ್ತಿನ್ನಿತರ ಎಡಪಕ್ಷಗಳೊಡನೆ ಸೇರದಿದ್ದರೆ ಚುನಾವಣೆಯಲ್ಲಿ ಗೆಲ್ಲುವ ಸಂಭವ ಕಡಿಮೆ ಎಂಬುದನ್ನು ಈ ಪಕ್ಷಗಳು ಅರಿತುಕೊಂಡಂತೆ ಕಾಣುವುದಿಲ್ಲ ?

ಈ ಅಸಮಾಧಾನವನ್ನು ವಿಸ್ತರಿಸಿ ಅದನ್ನೆಲ್ಲ ಒಟ್ಟುಗೂಡಿಸಿ ಎಡ ಮತ್ತು ಪ್ರಜಾಪ್ರಭುತ್ವ ಶಕ್ತಿಗಳ ಜೊತೆಯಲ್ಲಿ ಪ್ರತಿರೋಧದ ವಿಶಾಲ ಮಂಚ ರಚಿಸದಿದ್ದರೆ, ಆಳುವ ಪಕ್ಷದೊಳಗಿನ ಭಿನ್ನಾಭಿಪ್ರಾಯಗಳು ಪ್ರಜಾಪ್ರಭುತ್ವ ಶಕ್ತಿಗಳಿಗೆ ಸಹಾಯಕವಾಗಲಿಕ್ಕಿಲ್ಲ. ಕಾಂಗ್ರೆಯೊಳಗಿನ ಭಿನ್ನಾಭಿಪಾಯಗಳನ್ನು ಬಯಲುಗೊಳಿಸಿದರೆ ಮಾತ್ರ ತಾವು ಲಾಭ ಪಡೆಯಬಹುದೆಂದು ಬಂಡವಾಳಶಾಹಿ ಪಕ್ಷಗಳು ತಿಳಿದುಕೊಂಡಿವೆ. ಆಳುವ ಪಕ್ಷದ ವಿರುದ್ಧ ಜನತೆ ಪರಿಣಾಮಕಾರಿಯಾಗಿ ಎದ್ದೇಳಬೇಕಾದರೆ ಧೋರಣೆಯ ಕುರಿತು ಹಾಗೇ ಪರಿಹಾರ ಕ್ರಮಗಳ ವಿಷಯದಲ್ಲಿ ನಿಶ್ಚಿತ ಆಶ್ವಾಸನೆಗಳು ಅಗತ್ಯವೆಂದು ಎಡಪಕ್ಷಗಳೂ ನಮ್ಮ ಪಾರ್ಟಿಯೂ ಅಭಿಪ್ರಾಯ ಪಡುತ್ತದೆ.

ತನ್ನ ಐಕ್ಯತೆಯನ್ನು ಕಾಪಾಡಿಕೊಳ್ಳಲಿಕ್ಕೂ ಆಳಲಿಕ್ಕೂ ತಮ್ಮ ಅಸಮರ್ಥತೆಯನ್ನು ತೋರಿಸಿದೆ ಈಗಿನ ಬಿಕ್ಕಟ್ಟು. ಆಳುವ ಪಕ್ಷಕ್ಕೆ ಬಲವಾದ ಚುನಾವಣಾ ಸೋಲನ್ನುಂಟು ಮಾಡುವ, ದೇಶದ ರಾಜಕೀಯದಲ್ಲಿ ಎಡ ಶಕ್ತಿಗಳ ಪ್ರಾಧಾನ್ಯತೆಯನ್ನು ತೋರಿಸಿ, ತನ್ನ ಬಲವನ್ನು ಹೆಚ್ಚಿಸಿಕೊಳ್ಳುವಂತೆ ಎಡ ಮತ್ತು ಪ್ರಜಾಪ್ರಭುತ್ವ ಶಕ್ತಿಗಳು ತಮ್ಮ ಪ್ರೌಢಾವಸ್ಥೆಯನ್ನು ತೋರ್ಪಡಿಸಬೇಕಾಗಿದೆ. ಎಡ ಮತ್ತು ಪ್ರಜಾಪ್ರಭುತ್ವ ಶಕ್ತಿಗಳು ಸಾಮೂಹಿಕ ಚಳುವಳಿಗಳ ಮೂಲಕ ತಮ್ಮದೇ ಆದ ಸ್ವತಂತ್ರ ನೆಲೆಯನ್ನು ಪಡೆಯುವ ತನಕ, ಜನತೆಯ ಚಟುವಟಿಕೆಗಳನ್ನು ಹಲವಾರು ಪಾಲು ಹೆಚ್ಚಿಸಿಕೊಳ್ಳುವ ತನಕ ಅದನ್ನು ಸಾಧಿಸಲು ಶಕ್ಯವಿಲ್ಲ.

ರಕ್ಷಣಾ ಖಾತೆಯ ಅಪಾಯಕಾರಿ ಅದಕ್ಷತೆ

ರಕ್ಷಣ ಖಾತೆ ಅತ್ಯಂತ ಮಹತ್ವದ ರಂಗ. ಸಾಮ್ರಾಜ್ಯಶಾಹಿಗಳೂ, ಬಂಡವಾಳಶಾಹಿ ಸರ್ಕಾರಗಳೆಲ್ಲ ರಕ್ಷಣೆ ಖಾತೆಯನ್ನು ಎಂದಿಗೂ ಕಡೆಗಣಿಸುವುದಿಲ್ಲ. ಸಮತಾವಾದಿ ದೇಶಗಳಿಗೂ ರಕ್ಷಣೆ ಅತ್ಯಮೂಲ್ಯವಾದದು. ಆದರೆ ಇಂದಿರಾ ಸರ್ಕಾರಕ್ಕೆ ಅದಕ್ಷತೆ ಮತ್ತು ಭ್ರಷ್ಟಾಚಾರವೇ ಪ್ರಾಧಾನ್ಯ.

ಆಮದು ಬಂದೂಕುಗಳಿಗೆ ಗುಂಡು ತಯಾರಿಸಲು 1965ರಲ್ಲಿ ಕಲ್ಪಿಸಲಾದ ರಕ್ಷಣಾ ಯೋಜನೆ ಮಂಜೂರಾಗಿದ್ದು 1972ರಲ್ಲಿ. ಆದರೆ ಅದಿನ್ನೂ ಪೂರ್ಣಗೊಂಡಿಲ್ಲ. ಮುಂದಿನ ವರ್ಷ ಪೂರ್ಣಗೊಳ್ಳುವ ನಿರೀಕ್ಷೆಯಿದೆ. ಯೋಜನೆಯ ಪ್ರತಿ ಹಂತದಲ್ಲೂ ವಿಳಂಬ ಆಗಿರುವ ಬಗ್ಗೆ ಸಾರ್ವಜನಿಕ ಲೆಕ್ಕ ಪತ್ರ ಸಮಿತಿ 1965ರಿಂದ 20 ವರ್ಷಗಳ ಕಾಲ ಬಳಸಬೇಕಾಗಿದ್ದ ಈ ಶಸ್ತ್ರವನ್ನು 2000 ವರ್ಷದ ವರೆಗೂ ಬಳಸಲು ಯೋಚಿಸಿರುವುದರ ಕುರಿತು ಆಶ್ಚರ್ಯ ವ್ಯಕ್ತಪಡಿಸಿದೆ. ರಕ್ಷಣಾ ವಿಷಯದಲ್ಲಿ ಯಾವುದೋ ನೆವದಿಂದ ಉಂಟಾಗುವ ವಿಳಂಬ ರಾಷ್ಟ್ರದ ಮೇಲೆ ಮಾರಕ ಪರಿಣಾಮ ಬೀರಬಹುದೆಂದು ಲೆಕ್ಕ ಪತ್ರ ಸಮಿತಿ ಎಚ್ಚರಿಕೆ ನೀಡಿದೆ.

ಹಣ ದುರುಪಯೋಗದ ಕುರಿತು ಒಂದು ಉದಾಹರಣೆ ಎತ್ತಿ ತೋರಿಸುತ್ತಾ ಎಚ್. ಎಂ. ಟಿ.ಯ 'ಸಿ' ಕಾರ್ಖಾನೆಯಲ್ಲಿ ಷೆಲ್ ತುಂಬುವ ಘಟಕಕ್ಕೆ ಹವಾನಿಯಂತ್ರಣ ಒದಗಿಸಲು ರೂ. 10.68 ಲಕ್ಷ ವೆಚ್ಚ ಮಾಡಲಾಯಿತು. ಕೆಲವು ತಿಂಗಳ ನಂತರ ಹವಾನಿಯಂತ್ರಣ ಬೇಡವೆಂದು ನಿರ್ಧರಿಸಿ ಈ ಹಣ ದುರ್ವ್ಯಯವಾಗುವಂತೆ ಮಾಡಲಾಯಿತೆಂದು ಲೆಕ್ಕ ಸಮಿತಿ ತಿಳಿಸಿದೆ.

ಸೇನಾಪಡೆಗೆ 22,022 ಶಕ್ತಿಮಾನ್ ವಾಹನ ಮತ್ತು 10,677 ಒಂದು ಟನ್ ಸಾಮರ್ಥ್ಯದ ನಿಸ್ಸಾನ್ ಜೊಂಗಾ ವಾಹನ ಬೇಕಾಗಿದ್ದು, ರಕ್ಷಣಾ ಇಲಾಖೆಯ ಉಪಯೋಗಕ್ಕಾಗಿ ಇವುಗಳ ತಯಾರಿಕೆಗಾಗಿ ಭಾರೀ ವೆಚ್ಚದಲ್ಲಿ ಕಟ್ಟಲಾದ ಕಾರ್ಖಾನೆ ತನ್ನ ಸಾಮರ್ಥ್ಯಕ್ಕೆ ಅನುಸಾರವಾಗಿ ಉತ್ಪಾದನೆ ಮಾಡಲಿಲ್ಲವೆಂದು ಲೆಕ್ಕ ಸಮಿತಿ ವಿಷಾದ ವ್ಯಕ್ತಮಾಡಿ, ದೇಶದ ರಕ್ಷಣೆಗೆ ಈ ನೀತಿ ಗಂಡಾಂತರಕಾರಿಯಾಗಿದೆ ಎಂದು ಎಚ್ಚರಿಕೆ ನೀಡಿದೆ.

ನಿವೇಶನ ರಹಿತರ ನಿರಶನ ಅಂತ್ಯ

ನಿವೇಶನಗಳನ್ನು ಮತ್ತು ಮನೆಗಳನ್ನು ಕಟ್ಟಿಕೊಳ್ಳಲು ಧನಸಹಾಯವನ್ನು ಒದಗಿಸಬೇಕೆಂದು ಒತ್ತಾಯಿಸಿ ಹಂಚಿನಾಳದಿಂದ ಸವದತ್ತಿಗೆ ಕಾಲ್ನಡಿಗೆ ಜಾಥಾ ನಡೆಸಿ ಮನವಿ ಸಲ್ಲಿಸಿದ ನಂತರ ಸರದಿ ಅನ್ನ ಸತ್ಯಾಗ್ರಹವನ್ನು ಆರಂಭಿಸಿದ ಹಂಚಿನಾಳ ಗ್ರಾಮದ ಹರಿಜನ ಮತ್ತು ಲಂಬಾಣಿ ಕೃಷಿ ಕೂಲಿಕಾರರಿಗೆ ಕರ್ನಾಟಕ ಪ್ರಾಂತ ರೈತ ಸಂಘದ ಕಾ। ನಿತ್ಯಾನಂದ ಸ್ವಾಮೀಜಿಯವರು ಪಾನಕವನ್ನು ಕೊಡುವುದರೊಂದಿಗೆ ನಿರಶನವನ್ನು ಅಂತ್ಯಗೊಳಿಸಲಾಯಿತು.

ಸ್ವತಃ ದಲಿತರಾಗಿರುವ ಬೈಲಹೊಂಗಲ ಉಪ ವಿಭಾಗಾಧಿಕಾರಿ ಶ್ರೀ ಅಫವಾನಿಯವರು ಸತ್ಯಾಗ್ರಹಿಗಳೊಂದಿಗೆ ಚರ್ಚೆ ನಡೆಸಿ ಅವರ ಬೇಡಿಕೆಯನ್ನು ಈಡೇರಿಸುವ ಭರವಸೆಯನ್ನು ಕೊಟ್ಟು ಸತ್ಯಾಗ್ರಹಿಗಳು ತಮ್ಮ ನಿರಶನವನ್ನು ಹಿಂತೆಗೆದುಕೊಳ್ಳುವಂತೆ ಮನವೊಲಿಸಿದರು. ಹಂಚಿನಾಳ ಗ್ರಾಮದಲ್ಲಿ ಉಳಿದಿರುವ ಅಲ್ಪಸ್ವಲ್ಪ ಗಾಂವಠಾಣಾ ಜಮೀನನ್ನು ಸರ್ವೇ ಮಾಡಿಸಿ ಕೂಡಲೇ ವಿತರಣೆ ಮಾಡುವುದಾಗಿಯೂ, ಸರಕಾರವು ಸ್ವಾಧೀನಪಡಿಸಿಕೊಂಡ ಜಮೀನೊಂದರ ಮೇಲೆ ಭೂಮಾಲಕನು ತಂದಿರುವ ತಡೆಆಜ್ಞೆಯನ್ನು ಹಿಂತೆಗೆಸುವ ಬಗ್ಗೆ ಶೀಘ್ರ ಕ್ರಮ ಕೈಕೊಳ್ಳುವುದಾಗಿಯೂ ಮತ್ತು ಗ್ರಾಮದ ಸಮೀಪದಲ್ಲಿರುವ ಇನ್ನಷ್ಟು ಖಾಸಗಿ ಜಮೀನನ್ನು ಸ್ವಾಧೀನಪಡಿಸಿಕೊಂಡು ಹಂಚುವುದಾಗಿಯೂ ಭರವಸೆ ಕೊಟ್ಟ ಉಪ ವಿಭಾಗಾಧಿಕಾರಿಗಳು ತಮ್ಮ ಮಾತಿನ ಮೇಲೆ ವಿಶ್ವಾಸವಿಡಲು ವಿನಂತಿಸಿಕೊಂಡರು. ಸತ್ಯಾಗ್ರಹಿಗಳ ಪರವಾಗಿ ಕಾ। ನಿತ್ಯಾನಂದ ಸ್ವಾಮೀಜಿ ಮತ್ತು ಕಾ। ಲಕ್ಷ್ಮಣ ನಾಯಕ್ ಚರ್ಚೆಯಲ್ಲಿ ಭಾಗವಹಿಸಿದ್ದರು.

ಮಾತುಕತೆ ಮುಗಿದ ನಂತರ ಸತ್ಯಾಗ್ರಹಿಗಳ ನಾಯಕರೊಂದಿಗೆ ಉಪ ವಿಭಾಗಾಧಿಕಾರಿಗಳು ಹಾಗೂ ತಹಶೀಲದಾರರು ಹಂಚಿನಾಳ ಗ್ರಾಮಕ್ಕೆ ತೆರಳಿ ಸ್ಥಳ ಪರಿಶೀಲನೆ ನಡೆಸಿದರು. ಗ್ರಾಮ ಪಂಚಾಯತಿ ಚೇರಮನ್ ಶ್ರೀ ಆರ್. ಎಸ್. ಪಾಟೀಲರನ್ನು ಭೆಟ್ಟಿಯಾದ ಅಧಿಕಾರಿಗಳು ಮನೆ ಇಲ್ಲದ ಈ ಬಡವರ ಸಮಸ್ಯೆಯನ್ನು ಬಗೆಹರಿಸುವಲ್ಲಿ ಗ್ರಾಮಸ್ಥರು ಸಹಕರಿಸಬೇಕೆಂದು ವಿನಂತಿ ಮಾಡಿಕೊಂಡರು. ಹಂಚಿನಾಳ ಗ್ರಾಮದ ಎಲ್ಲ ಸಮಸ್ಯೆಗಳನ್ನು ಸಮಗ್ರವಾಗಿ ಅಭ್ಯಸಿಸಲು ಮೇ 4 ರಂದು ಗ್ರಾಮಸಭೆಯೊಂದನ್ನೆರ್ಪಡಿಸುವುದಾಗಿ ಪ್ರಕಟಿಸಿದ ಉಪವಿಭಾಗಾಧಿಕಾರಿಗಳು ಅಂದು ತಾಲ್ಲೂಕಿನ ಎಲ್ಲ ಅಧಿಕಾರಿಗಳು ಸಭೆಯಲ್ಲಿ ಪಾಲುಗೊಳ್ಳುವರು ಎಂದು ಹೇಳಿದರು.

ಕರಾಳ ಮಸೂದೆಯನ್ನು ವಿರೋಧಿಸಿ, ದೆಹಲಿಯಲ್ಲಿ ಅಧ್ಯಾಪಕರ ರ‍್ಯಾಲಿ

ದೇಶದ ವಿವಿಧ ಭಾಗಗಳಿಂದ ಬಂದ ಸಾವಿರಾರು ಮಂದಿ ಅಧ್ಯಾಪಕರು ಕಳೆದ ಏಪ್ರಿಲ್ 19ರಂದು ದೆಹಲಿಯ ಬೀದಿಗಳಲ್ಲಿ ಬೃಹತ್ ಮೆರವಣಿಗೆ ನಡೆಸಿ ಹಾಸ್ಪಿಟಲ್ ಮತ್ತಿತರ ಸಂಸ್ಥೆಗಳ (ವಿವಾದಗಳ) ಒಪ್ಪಂದ ಮಸೂದೆಯನ್ನು ಪ್ರತಿಭಟಿಸಿದರು. ಈ ಪ್ರದರ್ಶನವನ್ನು ಭಾರತೀಯ ಅಧ್ಯಾಪಕರ ರಾಷ್ಟ್ರೀಯ ಸಮನ್ವಯ ಸಮಿತಿ, ಅಖಿಲ ಭಾರತ ಸೆಕೆಂಡರಿ ಅಧ್ಯಾಪಕರ ಫೆಡರೇಶನ್, ಎಲಿಮೆಂಟರಿ ಶಿಕ್ಷಕರ ಅಖಿಲ ಭಾರತ ಫೆಡರೇಶನ್ ಮತ್ತು ಯೂನಿವರ್ಸಿಟಿ ಮತ್ತು ಕಾಲೇಜು ಅಧ್ಯಾಪಕರ ಅಖಿಲ ಭಾರತ ಫೆಡರೇಶನ್‌ಗಳು ವ್ಯವಸ್ಥೆಗೊಳಿಸಿದ್ದವು. ಸತ್ಯಸಾಧನ್ ಚಕ್ರವರ್ತಿ, ಸೌಮಿನ್ ಭಟ್ಟಾಚಾರ್ಯ, ಬಸುದೇವ ಆಚಾರ್ಯ ಮತ್ತು ವೃತ್ತಿಯಿಂದ ಅಧ್ಯಾಪಕರಾಗಿರುವ ಸಂಸತ್ ಸದಸ್ಯರುಗಳು ಪ್ರದರ್ಶನದ ನಾಯಕತ್ವ ವಹಿಸಿದ್ದರು.

ನಂತರ ಬೋಟ್ ಕ್ಲಬ್‌ನಲ್ಲಿ ನಡೆದ ಬಹಿರಂಗ ಸಭೆಯನ್ನುದ್ದೇಶಿಸಿ ಸಿ.ಪಿ.ಐ. (ಎಂ)ನ ಕಾ। ಸಮರ್ ಮುಖರ್ಜಿ, ಸಿ. ಪಿ. ಐ.ನ ಕಾ। ರಾಂ ಅವತಾರ್ ಶಾಸ್ತ್ರಿ ಮತ್ತು ಡಿ. ಎಸ್. ಪಿ.ಯ ಹರಿಕೇಶ್ ಬಹದ್ದೂರ್ ಮಾತನಾಡಿದರು. ನಂತರ ಪ್ರದರ್ಶನಕಾರರು ಲೋಕಸಭಾಧ್ಯಕ್ಷರನ್ನು ಭೇಟಿಯಾಗಿ ರಾಷ್ಟ್ರೀಯ ಬೇಡಿಕೆ ಪಟ್ಟಿಯನ್ನೊಳಗೊಂಡ ಮನವಿ ಪತ್ರವನ್ನರ್ಪಿಸಿದರು.

ರೈತಸಂಘ ಪ್ರಾರಂಭ

ದಿನಾಂಕ 27-4-83ರಂದು ಹರಪನಹಳ್ಳಿ ತಾಲ್ಲೂಕ್ ನಾಗಲಾಪುರ ತಾಂಡ್ಯದಲ್ಲಿ ಪ್ರಾಂತ ರೈತ ಸಂಘವನ್ನು ಪ್ರಾರಂಭಿಸಲಾಯಿತು. ತಾಂಡ್ಯದ ರೈತರು ಹಾಗೂ ಕೃಷಿ ಕೂಲಿಕಾರರನ್ನು ಸಭೆ ಸೇರಿಸಿ ಮೊದಲಿಗೆ ಸಿಂಗ್ರಿಹಳ್ಳಿ ಘಟಕದ ಉಪಾಧ್ಯಕ್ಷರಾದ ಟಿ. ಶೇಖರಪ್ಪ ಪರಿಚಯ ಮಾಡುತ್ತಾ ಸ್ವಾಗತಿಸಿದರು. ಹೋರಾಟ ಸಮಿತಿ ಅಧ್ಯಕ್ಷ ಬಿ. ಶಿವಾನಂದಪ್ಪ ಮಾತನಾಡಿದರು. ಈ ಸಭೆಯ ಅಧ್ಯಕ್ಷತೆಯನ್ನು ತಾಲ್ಲೂಕ್ ಸಂಚಾಲಕ ಕಾ। ಬಿ. ಪರಶುರಾಮ ವಹಿಸಿದ್ದರು. ಪರಶುರಾಮ ಮಾತನಾಡುತ್ತಾ ಗ್ರಾಮದ ರೈತರನ್ನು ಬಾಧಿಸುತ್ತಿರುವ ಸಮಸ್ಯೆಗಳಿಗಾಗಿ ಐಕ್ಯ ಹೋರಾಟಕ್ಕೆ ಮುಂದಾಗುವಂತೆ ತಿಳಿಸಿದರು ಮತ್ತು ಪ್ರಾಂತ ರೈತ ಸಂಘದ ಉದ್ದೇಶವನ್ನು ತಿಳಿಸಿದರು. ನಂತರ ಕಾರ್ಯಕಾರಿ ಸಭೆಯನ್ನು ಚುನಾಯಿಸಲಾಯಿತು.

ದಿನಾಂಕ 19-3-83ರಂದು ಹರಪನಹಳ್ಳಿ ತಾಲ್ಲೂಕಿನ ಭದ್ರಾಜಲಾಶಯದ ನೀರಾವರಿ ಯೋಜನೆಯ ಬೈಪಾಸ್ ಕಾಲುವೆ "ಹೋರಾಟ ಸಮಿತಿ"ಯನ್ನು ರಚಿಸಲಾಯಿತು. ಈ ಸಮಿತಿಗೆ 10 ಹಳ್ಳಿಗಳಿಂದ ರೈತ ಪ್ರತಿನಿಧಿಗಳನ್ನು ತೆಗೆದುಕೊಂಡು ಹೋರಾಟ ಸಮಿತಿಯ ಕಾರ್ಯಕಾರಿ ಸಭೆಯನ್ನು ಚುನಾಯಿಸಲಾಯಿತು.

ಹುಬ್ಬಳ್ಳಿ :

ಸಂಬಳ ಹೆಚ್ಚಳಕ್ಕಾಗಿ ಬಿ. ಡಿ. ಕೆ. ಅಲಾಯ್ ಕಾರ್ಮಿಕರ ಮೆರವಣಿಗೆ - ಸಭೆ

ಬಿ. ಡಿ. ಕೆ. ಅಲಾಯ್ ಕಂಪೆನಿಯ ಫೌಂಡ್ರಿಯಲ್ಲಿ ಸುಮಾರು 177 ಕಾರ್ಮಿಕರು ಅತಿ ಕಡಿಮೆ ಅಂದರೆ ತಿಂಗಳಿಗೆ ರೂ. 250 ರಿಂದ 300 ರೂ. ವರೆಗೆ ಪಗಾರ ಪಡೆದು ಅತೀ ಕಷ್ಟ, ಭೀಕರ ಯಾವಗಳಿಗೆಯಲ್ಲೂ ಆಕಸ್ಮಿಕಕ್ಕೆ ತುತ್ತಾಗಬಹುದಾದ ಪರಿಸ್ಥಿತಿಯಲ್ಲಿ ಕೆಲಸಮಾಡುತ್ತಿದ್ದಾರೆ. ಜೀವನಾವಶ್ಯಕ ಕನಿಷ್ಟ ಕೂಲಿಯಿಂದಲೂ ಈ ಕಾರ್ಮಿಕರು ವಂಚಿತರಾಗಿರುತ್ತಾರೆ.

ಸಂಬಳ ಹೆಚ್ಚಿಸಬೇಕೆಂದು ಆಡಳಿತ ವರ್ಗಕ್ಕೆ ಕೇಳಿಕೊಳ್ಳಲಾಗಿದೆ. ಸಂಘದೊಂದಿಗೆ ಎರಡು ಸುತ್ತಿನ ಮಾತುಕತೆಗಳನ್ನು ನಡೆಸಿದರೂ ಬಿ. ಡಿ. ಕೆ. ಅಲಾಯ್ ಕಂಪೆನಿಯ ಮಾಲೀಕರಾದ ಶ್ರೀ ಭರತ್ ಖೀಮಜಿಯವರು ಸಂಬಳ ಏರಿಸಲು ಸಾಧ್ಯವಿಲ್ಲವೆಂದು, ಒಂದು ವೇಳೆ ಏರಿಸುವುದಾದರೆ ಹೆಚ್ಚು ಗುಣಮಟ್ಟದ ಹೆಚ್ಚು ಟನ್ ಉತ್ಪಾದನೆ ನೀಡುವ ಕರಾರು ಒಪ್ಪಿಕೊಳ್ಳಬೇಕೆಂದು ಪಟ್ಟು ಹಿಡಿದು ಮಾತುಕತೆಗಳು ಮುರಿದು ಬೀಳುವಂತಾಗಿದೆ.

ಕರಾರು ರಹಿತವಾಗಿ ಮಾತುಕತೆಗೆ ಬರಲು ಜೀವನಾವಶ್ಯಕ ಕನಿಷ್ಟ ಪಗಾರ ನೀಡಲು (ತಿಂಗಳಿಗೆ ರೂ. 500) ಒತ್ತಾಯಿಸಿ ದಿನಂಪ್ರತಿ ಗೇಟ್ ಎದುರುಗಡೆ ಮತಪ್ರದರ್ಶನ ನಡೆಸಿರುವ ಕಾರ್ಮಿಕರು ದಿನಾಂಕ 16-4-83 ರಂದು ಮೆರವಣಿಗೆ ತೆಗೆದ ನಂತರ ಈಡಗಾ ಮೈದಾನದಲ್ಲಿ ಸಭೆ ನಡೆಸಿದರು.

ಸಂಘದ ಅಧ್ಯಕ್ಷ ಕಾ। ವಿ.ಎಸ್. ಹಳಕಟ್ಟಿಯವರು ಮಾತನಾಡಿ ಮಾಲಕರು ಕಾರ್ಮಿಕರಿಗೆ ಕನಿಷ್ಟ ಪಗಾರವನ್ನು ಕೊಡದೇ ಕಠಿಣ ಕೆಲಸ ಮಾಡಿಸಿಕೊಳ್ಳುತ್ತಿರುವ ನೀತಿಯನ್ನು ಕಟುವಾಗಿ ಟೀಕಿಸಿದರು. ಅಲ್ಲದೆ ಮತ್ತೆ ಮಾತುಕತೆ ನಡೆಸಿ ಸಂಬಳ ಹೆಚ್ಚಿಸಲಿಲ್ಲವಾದರೆ ದಿ. 25-4-83ರ ನಂತರ ಅನಿರ್ದಿಷ್ಟ ಮುಷ್ಕರಕ್ಕೆ ಇಳಿಯುವುದು ಅನಿವಾರ್ಯವಾದೀತೆಂದು ಎಚ್ಚರಿಕೆಯನ್ನಿತ್ತರು. ಉಪಾಧ್ಯಕ್ಷ ಶ್ರೀ ಜಿ. ಆರ್. ಶಿರಪೂರ ಮತ್ತು ಮೋಪೆಕ್ಸ್ ಮೋಪೆಡ್ ಕಾರ್ಮಿಕ ಸಂಘದ ಸಂಘಟನಾ ಕಾರ್ಯದರ್ಶಿ ಕಾ। ಸುಧೀಂದ್ರ ಕುಲಕರ್ಣಿ ಮಾತನಾಡಿ ಕಾರ್ಮಿಕರು ಐಕ್ಯದಿಂದ ಹೋರಾಟಕ್ಕಿಳಿಯಲು ಕೇಳಿಕೊಂಡರು.

ತಮಿಳುನಾಡು

ಕಾ। ಎಂ. ಆರ್. ವಿ. ಆರೋಗ್ಯ ಸುಧಾರಣೆ

ಮಾರ್ಕ್ಸ್‌ವಾದೀ ಕಮ್ಯೂನಿಸ್ಟ್ ಪಕ್ಷದ ಕೇಂದ್ರ ಸಮಿತಿಯ ಸದಸ್ಯರೂ, ತಮಿಳುನಾಡಿನ ಪಕ್ಷದ ಹಿರಿಯ ಮುಂದಾಳುಗಳೂ ಆಗಿರುವ ಕಾ। ಎಂ. ಆರ್. ವೆಂಕಟರಾಮನ್ ಅವರಿಗೆ ಕೆಲವು ದಿನಗಳ ಹಿಂದೆ ಕ್ಯಾನ್ಸರ್‌ಗಾಗಿ ಶಸ್ತ್ರಕ್ರಿಯೆ ನಡೆಸಲಾಗಿತ್ತು. ನಂತರ ಅವರ ಪರಿಸ್ಥಿತಿ ತೀರಾ ಹದಗೆಟ್ಟು ಸಾವಿನಂಚಿಗೆ ಸಾಗಿದ್ದರು. ಅನೇಕ ದಿನಗಳ ಕಾಲ ಪ್ರಜ್ಞಾಹೀನ ಸ್ಥಿತಿಯಲ್ಲೇ ಇದ್ದ ಕಾ। ವೆಂಕಟರಾಮನ್ ಅವರು ಈಗ ಚೇತರಿಸಿಕೊಳ್ಳುತ್ತಿರುವುದಾಗಿ ವರದಿಯಾಗಿದೆ.

ಕಾ। ವೆಂಕಟರಾಮನ್ ಅವರನ್ನು ಕಾಣಲು ಪಕ್ಷದ ಪೊಲಿಟ್ ಬ್ಯೂರೋ ಸದಸ್ಯರುಗಳಾದ ಕಾ। ಬಿ. ಟಿ. ರಣದಿವೆ, ಕಾ। ಪಿ. ರಾಮಮೂರ್ತಿ, ಕಾ। ಪಿ. ಸುಂದರಯ್ಯ ಅಲ್ಲದೆ ಬೇರೆ ಬೇರೆ ರಾಜ್ಯಗಳ ಪಾರ್ಟಿ ಮುಖಂಡರುಗಳು ಮದ್ರಾಸಿಗೆ ತೆರಳಿದ್ದರು.

ಸಿ. ಪಿ. ಐ (ಎಂ)ನ ಕರ್ನಾಟಕ ರಾಜ್ಯ ಸಮಿತಿಯ ಸದಸ್ಯರಾದ ಕಾ। ಪಿ. ಕೆ. ಸುಬ್ರಮಣಿ ಅವರು ಈಚೆಗೆ ಕಾ। ಎಂ. ಆರ್. ವಿ. ಅವರ ಯೋಗಕ್ಷೇಮ ವಿಚಾರಿಸಲು ಮದ್ರಾಸಿಗೆ ತೆರಳಿದ್ದರು.

ಬಿ.ಡಿ.ಕೆ.ಅಲಾಯ್ ಕಾರ್ಮಿಕರ ಮುಷ್ಕರಕ್ಕೆ ಬೆಂಬಲ

ಹುಬ್ಬಳ್ಳಿಯ ಗೋಕುಲ ರೋಡಿನಲ್ಲಿರುವ ಬಿ. ಡಿ. ಕೆ. ಅಲಾಯ್ ಕಂಪೆನಿಯ 177 ಕಾರ್ಮಿಕರು ದಿನಾಂಕ 27-4-83 ರಿಂದ ಅನಿರ್ದಿಷ್ಟ ಕಾಲ ಮುಷ್ಕರಕ್ಕೆ ಇಳಿದಿದ್ದಾರೆ. ಈ ಕಾರ್ಮಿಕರು ಅತ್ಯಂತ ಕಠಿಣ ಶ್ರಮದ ಕೆಲಸದಲ್ಲಿ ತೊಡಗಿದ್ದರೂ ಹಾಗೂ ಬಿ. ಡಿ. ಕೆ. ಅಲಾಯ್ ಕಂಪೆನಿಯ ಸರಕುಗಳು (ಕಾಸ್ಟಿಂಗುಗಳು) ಮಾರುಕಟ್ಟೆಯಲ್ಲಿ ತುಂಬಾ ಹೆಸರುವಾಸಿಯಾಗಿ ಬೇಡಿಕೆಯಲ್ಲಿದ್ದರೂ ಕೂಡ, ಅಲ್ಲಿಯ 90 ಪ್ರತಿಶತ ಕೆಲಸಗಾರರಿಗೆ ಜೀವನಾವಶ್ಯಕ ಕನಿಷ್ಟ ವೇತನ ರೂ. 500 ಕ್ಕಿಂತಲೂ ಬಹಳ ಕಡಿಮೆ ಸಂಬಳ ಸಿಗುತ್ತಿದೆ. ಮಾಲೀಕವರ್ಗದ ಅಪರಿಮಿತ ಲಾಭದಾಹ, ಕಾರ್ಮಿಕರ ಕುಂದು ಕೊರತೆಗಳ ಬಗ್ಗೆ ಸ್ವಲ್ಪವೂ ಕಾಳಜಿ ಇಲ್ಲದಿರುವುದೇ ಮುಷ್ಕರಕ್ಕೆ ಕಾರಣ. ಉತ್ಪಾದನೆ ಹೆಚ್ಚಳ ಮತ್ತು ತಿರಸ್ಕೃತ ಪ್ರಮಾಣದ ಷರತ್ತು ಇಲ್ಲದೇ ಎಂಟು ತಾಸುಗಳ ಸಾಮಾನ್ಯ ಕೆಲಸಕ್ಕೆ ತಮಗೆ ಜೀವನಾವಶ್ಯಕ ವೇತನ ಸಿಗುವಂತಾಗಬೇಕೆಂಬ ಕಾರ್ಮಿಕರ ಮೂಲ ಬೇಡಿಕೆ ಹಾಗೂ ಇದು ಒಪ್ಪಿಗೆಯಾದರೆ ಉತ್ಪಾದನೆ ಹೆಚ್ಚಳ—ತಿರಸ್ಕೃತ ಪ್ರಮಾಣಗಳಿಗೆ ಸಂಬಂಧಿಸಿದ ಸೂಕ್ತ ಪ್ರೋತ್ಸಾಹಧನ ಯೋಜನೆಯ ಬಗ್ಗೆ ಚರ್ಚಿಸಲು ಅವರ ಸಿದ್ಧತೆ ಇವು ಕಾರ್ಮಿಕರ ಅತ್ಯಂತ ನ್ಯಾಯ ಸಮ್ಮತ ನಿಲುವನ್ನೇ ಎತ್ತಿತೋರಿಸುತ್ತವೆ. ಉತ್ಪಾದನೆ ತಿರಸ್ಕೃತ ಪ್ರಮಾಣದ ಷರತ್ತಿಗೆ ಒಪ್ಪದೇ ವೇತನ ಹೆಚ್ಚಳದ ಬಗ್ಗೆ ಮಾತುಕತೆ ಯೇ ಸಾಧ್ಯವಿಲ್ಲವೆಂಬ ಮಾಲೀಕವರ್ಗದ ಮೊಂಡುತನದ ನಿಲುವೇ ಮಾತುಕತೆಗಳು ಮುರಿದು ಬೀಳಲು ಹಾಗೂ ಅನಿವಾರ್ಯವಾಗಿ ಕಾರ್ಮಿಕರು ಮುಷ್ಕರಕ್ಕಿಳಿಯುವಂತಾಗಲು ಕಾರಣವೆಂದು ತಿಳಿದುಬಂದಿದೆ.

ಬಿ. ಡಿ. ಕೆ. ಅಲಾಯ್ ಕಂಪೆನಿಯ ಮಾಲೀಕನಾದ ಭರತ ಖೀಮಜಿಯು ಕಾರ್ಮಿಕರ ಮೇಲೆ ದಬ್ಬಾಳಿಕೆ ನಡೆಸುವಲ್ಲಿ ಹಾಗೂ ಕಾರ್ಮಿಕ ಹೋರಾಟಗಳನ್ನು ಮುರಿಯಲು ಹೊಂಚುಹಾಕುವುದರಲ್ಲಿ ಪಳಗಿದ ಕೈ ಎಂದು ತಿಳಿದು ಬಂದಿದೆ. ಈಗಾಗಲೇ ಬಿ. ಡಿ. ಕೆ. ಕಾರ್ಮಿಕರ ಶಾಂತಿಯುತ ಮುಷ್ಕರ, ಹೋರಾಟದ ಬಗ್ಗೆ ನಾಗರಿಕರ ಕಣ್ಣಲ್ಲಿ ತಪ್ಪು ಅಭಿಪ್ರಾಯ ಮೂಡಿಸುವುದಕ್ಕಾಗಿ ಸುಳ್ಳಿನ ಕೊಂಪೆಯಾದ ಪತ್ರಿಕಾ ಜಾಹಿರಾತನ್ನು ನೀಡುವುದು, ಮುಷ್ಕರದ ಸ್ಥಳಕ್ಕೆ ಅಕಾರಣವಾಗಿ ಪೋಲೀಸ್ ಪಡೆಯನ್ನು ಕರೆಯಿಸಿ ನಿಲ್ಲಿಸುವುದು ಇಂಥ ಕಾರ್ಮಿಕ ವಿರೋಧಿ ಕಾರ್ಯದಲ್ಲಿ ಆಡಳಿತವರ್ಗ ತೊಡಗಿದೆ.

ಕಾರ್ಮಿರ ಈ ನ್ಯಾಯಯುತ ಹೋರಾಟಕ್ಕೆ ಬೆಂಬಲ ವ್ಯಕ್ತಪಡಿಸುವ ಉದ್ದೇಶದಿಂದ ಹುಬ್ಬಳ್ಳಿ ವಿವಿಧ ಕಾರ್ಮಿಕ ಸಂಘಟನೆಗಳು ದಿನಾಂಕ 4-5-80 ರಂದು ಸಭೆ ಸೇರಿ ಜಂಟಿ ಕಾರ್ಯಕ್ರಮವನ್ನು ರೂಪಿಸಿಕೊಂಡಿರುವುದಾಗಿ ವರದಿಯಾಗಿದೆ.

ಸಭೆಯಲ್ಲಿ 'ಬಿ.ಡಿ.ಕೆ. ಅಲಾಯ್ ನೌಕರರ ಸೌಹಾರ್ದ ಕ್ರಿಯಾ ಸಮಿತಿ' ಯನ್ನು ರಚಿಸಿಕೊಳ್ಳಲಾಗಿದೆಯೆಂದು ತಿಳಿದು ಬಂದಿದೆ. ಸಭೆಯಲ್ಲಿ ಭಾಗವಹಿಸಿದ ವಿವಿಧ ಕಾರ್ಮಿಕ ಸಂಘಟನೆಗಳೆಂದರೆ ಮೈಸೂರು ಕಿರ್ಲೋಸ್ಕರ್ ಕೆಲಸಗಾರರ ಸಂಘ, ಸುಂದತ್ತಾ ಕೆಲಸಗಾರರ ಸಂಘ, ಪ್ಲೈವುಡ್ ಕಾರ್ಮಿಕರ ಸಂಘ, ಮೋಪೆಕ್ಸ್ ಕಾರ್ಮಿಕರ ಸಂಘ, ಕಿರ್ಲೋಸ್ಕರ್ ಎಲೆಕ್ಟ್ರಿಕ್ ಕೆಲಸಗಾರರ ಸಂಘ, ಕೆ.ಪಿ.ವಿ., ಶಿಕ್ಷಕೇತರ ನೌಕರರ ಸಂಘ ಮತ್ತು ಕರ್ನಾಟಕ ರಾಜ್ಯ ಮಾಧ್ಯಮಿಕ ಶಾಲಾ ನೌಕರರ ಸಂಘ ಮುಂತಾದವುಗಳು.

ಹೆಗ್ಡೆ ಅವರಿಗೆ ಡಿ.ವೈ.ಎಫ್.ಐ. ಬೆಂಬಲ

1983 ಮೇ 15ರಂದು ನಡೆಯುವ ಚುನಾವಣೆಯಲ್ಲಿ ಕನಕಪುರ ಕ್ಷೇತ್ರದಿಂದ ಸ್ಪರ್ಧಿಸಿರುವ ರಾಜ್ಯ ಮುಖ್ಯಮಂತ್ರಿ ಶ್ರೀರಾಮಕೃಷ್ಣ ಹೆಗ್ಡೆ ಅವರ ಪರವಾಗಿ ಭಾರತ ಪ್ರಜಾಸತ್ತಾತ್ಮಕ ಯುವಜನ ಫೆಡರೇಷನ್ (ಡಿ.ವೈ. ಎಫ್.ಐ.) ಬೆಂಗಳೂರು ಜಿಲ್ಲಾ ಸಮಿತಿಯು ತನ್ನ ಬೆಂಬಲ ನೀಡಿದೆ.

ಅಧಿಕಾರವನ್ನು ಕಳೆದುಕೊಂಡರೂ. ಪ್ರಬಲ ವಿರೋಧ ಪಕ್ಷವಾಗಿರುವ ಸರ್ವಾಧಿಕಾರಿ ಕಾಂಗ್ರೆಸ್ ಪುನಃ ಅಧಿಕಾರಕ್ಕೆ ಬರಲು ನಡೆಸುವ ಸರ್ವತಂತ್ರ ಪ್ರಯತ್ನಗಳನ್ನು ವಿಫಲಗೊಳಿಸಿ ಜನತಾ ಸರ್ಕಾರ ಮುಂದುವರಿಯಲು ಜನತೆಯು ಕಾರ್ಯಾರಂಭ ಮಾಡಬೇಕೆಂದು ವಿನಂತಿಸಿರುವ ಡಿ.ವೈ.ಎಫ್.ಐ. ತನ್ನ ಸಂಘಟನಾ ಶಕ್ತಿಯೆಲ್ಲವನ್ನೂ ಬಳಸಿ ಕನಕಪುರ ಕ್ಷೇತ್ರದಲ್ಲಿ ಕಾರ್ಯ ನಡೆಸುವುದಾಗಿ ತಿಳಿಸಿದೆ.

ಪೋಲೀಸರ ಕಿರುಕುಳ- ಆಟೋ ಚಾಲಕರ ಪ್ರತಿಭಟನೆ

ಆಟೋ ಚಾಲಕರ ಮೇಲೆ ಸಣ್ಣ ಪುಟ್ಟ ತಪ್ಪುಗಳನ್ನು ಹೊರಿಸಿ ಅವರ ಆಟೋಗಳನ್ನು ಮನಸ್ಸಿಗೆ ಬಂದಂತೆ ಪೋಲೀಸರು ವಶಪಡಿಸಿಕೊಳ್ಳುತ್ತಿದ್ದುದನ್ನು ಪ್ರತಿಭಟಿಸಿ ದಿ. 9-5-1983 ರಂದು ಬೆಂಗಳೂರು ನಗರದ ಆಟೋ ಚಾಲಕರು ಸಿ.ಐ.ಟಿ.ಯು.ನ ಅಧ್ಯಕ್ಷರೂ, ಶಾಸಕರೂ ಆಗಿರುವ ಕಾ॥ ಎಸ್. ಸೂರ್ಯನಾರಾಯಣರಾವ್ ಅವರ ನೇತೃತ್ವದಲ್ಲಿ ಪೋಲೀಸ್ ಕಮಿಷನರ್ ಅವರ ಕಚೇರಿಯ ಮುಂದೆ ಪ್ರದರ್ಶನ ನಡೆಸಿದರು.

ನಂತರ ಕಾ। ಸೂರ್ಯನಾರಾಯಣ ರಾವ್, ಕಾ। ಪಿ. ಕೆ. ಸುಬ್ರಮಣಿ, ಕಾ। ವೆಂಕಟೇಶಗೌಡ, ಕಾ। ಜಿ. ಸುಬ್ಬರಾವ್ ಮತ್ತು ಕಾ॥ ನಾಗರಾಜ ಅವರುಗಳನ್ನೊಳಗೊಂಡ ನಿಯೋಗವೊಂದು ಆಡಿಷನಲ್ ಕಮಿಷನರ್ ಚಂದೂಲಾಲ್ ಅವರನ್ನು ಭೇಟಿ ಮಾಡಿ ಆಟೋ ಚಾಲಕರ ಕುಂದು ಕೊರತೆಗಳ ಬಗ್ಗೆ ಚರ್ಚೆ ನಡೆಸಿತು. ಚರ್ಚೆಯಲ್ಲಿ ಸಂಚಾರ ವಿಭಾಗದ ಡಿ. ಸಿ. ಪಿ. ಸಾಂಗ್ಲಿಯಾನ ಅವರು ಸಹ ಭಾಗವಹಿಸಿದ್ದರು. ಚಾಲಕರು ಸಣ್ಣಪುಟ್ಟ ತಪ್ಪುಗಳನ್ನು ಮಾಡಿದಾಗ ಅದನ್ನು ವಿಚಾರಣೆ ನಡೆಸಬೇಕೇ ಹೊರತು ಅವರ ವಾಹನಗಳನ್ನು ವಶಪಡಿಸಿಕೊಳ್ಳುವುದು ಸರಿಯಾದ ಕ್ರಮವಲ್ಲವೆಂದು ನಿಯೋಗ ತಿಳಿಸಿತು.

ನಂತರ ಅಧಿಕಾರಿಗಳು ವಶಪಡಿಸಿಕೊಳ್ಳಲ್ಪಟ್ಟಿರುವ ವಾಹನಗಳನ್ನು ಬಿಡುಗಡೆ ಮಾಡುವಂತೆ ಸಂಬಂಧಿಸಿದ ಪೋಲೀಸ್ ಠಾಣೆಗಳಿಗೆ ಆದೇಶಗಳನ್ನು ಕಳಿಸಿದರು.

ಆಟೋ ಚಾಲಕರು ತಮ್ಮ ಪಾಳಿ ಮುಗಿದ ನಂತರ ಆಟೋ ಯಾವ ಕಡೆಗೆ ಹೋಗುವುದೆಂಬ ಬಗ್ಗೆ ತಿಳಿವಳಿಕೆ ನೀಡುವಂಥ ಫಲಕಗಳನ್ನು ಹಾಕಿಕೊಳ್ಳುವುದಾಗಿ ಒಪ್ಪಿಕೊಂಡಿದ್ದಾರೆ.

ಸಾಣಿಕೊಪ್ಪ :

ರೈತ ಸಂಘದಿಂದ ಉಪವಾಸ ಸತ್ಯಾಗ್ರಹ

ಬೆಳಗಾಂ ಜಿಲ್ಲೆಯ ಬೈಲಹೊಂಗಲ ತಾಲ್ಲೂಕಿನ ಸಂಪಗಾವ ಟೌನ್ ಪಂಚಾಯಿತಿಯ ಅವ್ಯವಹಾರ, ಭ್ರಷ್ಟಾಚಾರದ ಬಗ್ಗೆ ಮತ್ತು ಪಂಚಾಯಿತಿಗೆ ಸೇರಿದ ಸಾಣಿಕೊಪ್ಪ ಗ್ರಾಮಕ್ಕೆ ಮಲತಾಯಿ ಧೋರಣೆ ತೋರಿಸುತ್ತ ಬಂದ ಬಗ್ಗೆ ಒಂದು ವರ್ಷದಿಂದ ಸಾಣಿಕೊಪ್ಪ ಗ್ರಾಮದ ಪ್ರಾಂತ ರೈತಸಂಘದ ಘಟಕವು ಹೋರಾಡುತ್ತ ಬಂದಿತ್ತು. ಈಗ ಸಂಪಗಾಂವಿಯ ಯುವಕ ಸಂಘದವರು ಪಂಚಾಯಿತಿಯ ಅವ್ಯವಹಾರಗಳು ಬಯಲಿಗೆ ಬರಲಿ, ಊರಿಗೆ ನೀರು ತಕ್ಷಣ ಸರಬರಾಜಾಗಲಿ ಎಂದು ಬೇಡಿಕೆ ಮುಂದಿಟ್ಟುಕೊಂಡು ಉಪವಾಸ ಸತ್ಯಾಗ್ರಹ ಹೂಡಿದ್ದರು. ಅವರಿಗೆ ಬೆಂಬಲಾರ್ಥವಾಗಿ ಮತ್ತು ಸಾಣಿಕೊಪ್ಪ ಗ್ರಾಮದ ಪಂಚಾಯಿತಿ ಬಗೆಗಿನ ಬೇಡಿಕೆಗಳ ಸಲುವಾಗಿ ಪ್ರಾಂತ ರೈತ ಸಂಘದ 16 ಜನ ರೈತರು, ಕೂಲಿಕಾರರು ಘೋಷಣೆ ಕೂಗುತ್ತಾ ಜಾಥಾ ಹೋಗಿ ಪಂಚಾಯಿತಿ ಎದುರು ಉಪವಾಸ ಸತ್ಯಾಗ್ರಹ ಹೂಡಿದ್ದರು.

ಅದೇ ದಿನ ಸಂಜೆ ತಹಶೀಲದಾರರು ಬಿಡಿಓ ಅಪರಾತಪರಾ ತನಿಖೆ ಮಾಡುವ ಭರವಸೆ ಕೊಟ್ಟು, ಪಂಚಾಯಿತಿಗೆ ಬೀಗ ಮುದ್ರೆ ಹಾಕಿದ್ದರಿಂದ ತಾತ್ಕಾಲಿಕವಾಗಿ ಉಪವಾಸ ಸತ್ಯಾಗ್ರಹ ನಿಲ್ಲಿಸಲಾಗಿದೆ. ರೈತ ಸಂಘದ ಹಲವಾರು ಬೇಡಿಕೆಗಳು ಈಗ ಹೋರಾಟದಿಂದಾಗಿ ಈಡೇರುತ್ತಿವೆ. ಬೈಲಹೊಂಗಲಕ್ಕೂ ರೈತ ಕೂಲಿಗಾರರು ಜಾತಾ ಹೋಗಿ ತಮ್ಮ ಹಳ್ಳಿಯ ಸಮಸ್ಯೆಗಳನ್ನೂ ತಹಶೀಲದಾರರೆದುರು ಚರ್ಚಿಸಿದ್ದಾರೆ. ಎಂಬುದಾಗಿ ಕಾರ್ಯದರ್ಶಿ ಬಸಲಿಂಗಪ್ಪ ಡೊಳ್ಳಿನ ಪ್ರಕಟನೆಯಲ್ಲಿ ತಿಳಿಸಿದ್ದಾರೆ.

ಪಾಕಿಸ್ತಾನ್: ಕಮ್ಯುನಿಸ್ಟರ ಮೇಲೆ ಸುಳ್ಳು ಮೊಕದ್ದಮೆ

ಪಾಕಿಸ್ತಾನದಲ್ಲಿ ಕಮ್ಯೂನಿಸ್ಟ್ ಚಳುವಳಿಯನ್ನು ಹತ್ತಿಕ್ಕಲು ಅಲ್ಲಿನ ಸೈನ್ಯಾಧಿಕಾರಿಗಳು ಪಾಕಿಸ್ತಾನ್ ಕಮ್ಯೂನಿಸ್ಟ್ ಪಕ್ಷದ ಕೇಂದ್ರ ಸಮಿತಿ ನಾಯಕರ ಮೇಲೆ ಸುಳ್ಳು ಮೊಕದ್ದಮೆಯನ್ನು ಹೂಡಿದ್ದಾರೆ. ಸುರ್ಖ್ ಪಾರ್ಚಂ (ಕೆಂಬಾವುಟ) ಮೊಕದ್ದಮೆ ಎಂಬ ಹೆಸರಿನಲ್ಲಿ, ಜಾಂಸಾಕಿ ಮೊಕದ್ದಮೆ ಎಂಬ ಹೆಸರಿನಲ್ಲೂ ಪಾಕಿಸ್ತಾನದಲ್ಲಿರುವ ಕಮ್ಯೂನಿಸ್ಟರ ಮೇಲೆ ಹೂಡಿದ ಪಿತೂರಿಯು 1979ರಲ್ಲಿ ಆರಂಭವಾಯಿತು. ಪಾಕಿಸ್ತಾನ್ ಕಮ್ಯೂನಿಸ್ಟ್ ಪಕ್ಷದ ಕೇಂದ್ರ ಸಮಿತಿ ಸದಸ್ಯರಾದ ಜಾಂಸಾಕಿಯವರನ್ನು ಅದಕ್ಕೆ ಹಿಂದೆಯೇ ಬಂಧಿಸಿದ್ದರು. 1980 ಜೂಲೈ 30ರಂದು ಪ್ರೊಫೆಸರ್ ಜಮಾಲ್‌ನಖ್ವಿ, ನಸೀರ್ ಅಬ್ಬಾಸ್, ಅಮರ್ ಲಾಲ್, ಸೋಹೇಲ್ ಸಾಂಗಿ, ಕಮಾಲ್ ವಾರ್‌ಸಿ, ಶಬೀರ್‌ಶೇರ್, ಬದರ್ ಅಬ್ರೂ ಮುಂತಾದ ಕಮ್ಯೂನಿಸ್ಟ್ ಮುಖಂಡರುಗಳನ್ನು ಬಂಧಿಸಿ ಲಾಂಡಿ ಕಾರಾಗೃಹದಲ್ಲಿ ಇಟ್ಟರು. ಕಾರಾಗೃಹದಲ್ಲಿ ಪಾಕಿಸ್ತಾನ್ ಸೈನ್ಯಾಧಿಕಾರಿಗಳು ಇವರನ್ನು ಅತಿ ಕ್ರೂರವಾಗಿ ಹಿಂಸಿಸಿದರು. 1980 ಅಗಸ್ಟ್ 8 ರಂದು ಲಾಹೋರಿನ ಶಾಹಿಕೋಟೆಯ ಕಾರಾಗೃಹದಲ್ಲಿ ಅವರು ಕಾ॥ ನಜೀರ್ ಅಬ್ಬಾಸ್‌ರನ್ನು ಮರ್ಧಿಸಿ ಕೊಂದರು.

ಒಂದು ವರ್ಷವಾದ ನಂತರವೂ ಈ ಕಮ್ಯೂನಿಸ್ಟ್ ಮುಖಂಡರ ಮೇಲಿನ ಮೊಕದ್ದಮೆಯ ಎಫ್.ಪಿ.ಆರ್.ನ್ನೂ ಸಹ ಸೈನ್ಯಾಧಿಕಾರಿಗಳು ತಯಾರಿಸಲಿಲ್ಲ. ವಿಚಾರಣೆ ಮಾಡದೆ ಈ ಕಾಲವಷ್ಟು ಅವರನ್ನು ಅತಿ ಕ್ರೂರವಾಗಿ ಮರ್ದಿಸುತ್ತಿದ್ದರು. 1980 ಅಕ್ಟೋಬರ್ ತಿಂಗಳಲ್ಲಿ ವಿಶೇಷ ನ್ಯಾಯಾಲಯ ಅವರನ್ನು ವಿಚಾರಣೆ ಮಾಡಲು ಆರಂಭಿಸಿತು. ಮಿಲಿಟರಿಯ ಒಬ್ಬ ಮೇಜರನ್ನೂ ಮತ್ತು ಅದಕ್ಕಿಂತ ಕೆಳ ದರ್ಜೆಯ ಮೂರು ಅಧಿಕಾರಿಗಳನ್ನು ನ್ಯಾಯಾಧೀಶರ ಕುರ್ಚಿಯಲ್ಲಿ ಕುಳ್ಳಿರಿಸಿ ವಿಚಾರಣೆಯನ್ನು ಪ್ರಾರಂಭಿಸಿದರು. ಕಮ್ಯೂನಿಸ್ಟ್ ನಾಯಕರ ಮೇಲಿನ ಮೊಕದ್ದಮೆ ಹೀಗಿದೆ. ಒಂದು: ವಿಭಿನ್ನ ವರ್ಗಗಳ ಮಧ್ಯೆ ವಿದ್ವೇಷ ಘರ್ಷಣೆಯನ್ನು ಸೃಷ್ಟಿಸುವ ರೀತಿಯಲ್ಲಿ ಕಿರು ಹೊತ್ತಿಗೆಗಳು, ಲೇಖನಗಳು ಪ್ರಚಾರ ಮಾಡಿದೆ. ಎರಡು: ಸೈನ್ಯಾಧಿಕಾರಕ್ಕೆ ವಿರುದ್ಧವಾಗಿ ವಿದ್ವೇಷ ಪ್ರಚಾರ ಮಾಡಿದರು. ಮೂರನೆಯದಾಗಿ; ಪಾಕಿಸ್ತಾನದ ಸಂವಿಧಾನವನ್ನು ತಪ್ಪಾಗಿ ವಾಖ್ಯಾನ ಮಾಡಿ ಪ್ರಚಾರ ಮಾಡಿದರು ಮತ್ತು ಕೊನೆಯದಾಗಿ ದೇಶದ್ರೋಹ.

ಕಮ್ಯೂನಿಸ್ಟ್ ಮುಖಂಡರ ಮೇಲೆ ಹೂಡಿದ ಮೊಕದ್ದಮೆಗೆ ಪುರಾವೆಯಾಗಿ ಸೈನ್ಯಾಧಿಕಾರಿಗಳು ಕಮ್ಯೂನಿಸ್ಟ್ ಪಕ್ಷದ ಸುರ್ಖ್ ಪರ್ಚಂ (ಕೆಂಬಾವುಟ)ನ ಕೆಲವು ಪ್ರತಿಗಳು, ಹಲ್‌ಚಲ್ ಎಂಬ ಮಾಸಿಕೆ, ನ್ಯೂ ಟೈಮ್ಸ್ ಎಂಬ ಮಾಸಿಕೆಯ 1978 ಅಕ್ಟೋಬರ್–ನವಂಬರ್ ಪ್ರತಿಗಳು ಹಾಗೂ ಜನತಾ ಪ್ರಜಾಪ್ರಭುತ್ವವೆಂಬ ವಾರ ಪತ್ರಿಕೆಯ ಒಂದು ಪ್ರತಿಯನ್ನು ಸಾಕ್ಷ್ಯವಾಗಿ ನ್ಯಾಯಾಲಯದಲ್ಲಿ ಹಾಜರುಪಡಿಸಿದರು. ಆದರೆ ಈ ಪ್ರಕಟಣೆಗಳೆಲ್ಲವೂ ಆ ಕಾಲದಲ್ಲಿ ಪಾಕಿಸ್ತಾನದಲ್ಲಿ ಪ್ರಚಾರ ಮಾಡುವುದಕ್ಕೆ ಯಾವುದೇ ತಡೆಯಾಗಲಿ ಇರಲಿಲ್ಲ. ಆದ್ದರಿಂದ ಜಾಂಸಾಕಿ ನ್ಯಾಯಾಲಯವನ್ನು ಕೇಳಿದರು. ನನ್ನ ಹತ್ತಿರ ಜನತಾ ಪ್ರಜಾಪ್ರಭುತ್ವದ ಒಂದು ಪ್ರತಿ ಇತ್ತು. ಡಿಕ್ಲರೇಷನ್ ಇರುವ ಒಂದು ವಾರ ಪತ್ರಿಕೆ ನನ್ನ ಕೈಯಲ್ಲಿ ಇರುವುದು ಹೇಗೆ ಕಾನೂನಿಗೆ ವಿರುದ್ಧವಾಗುತ್ತದೆ?

ಮೇಲೆ ತಿಳಿಸಿದ ವಾರ ಪತ್ರಿಕೆ, ಮಾಸಿಕೆಗಳನ್ನು ಕಮ್ಯೂನಿಸ್ಟ್ ಮುಖಂಡರಿಂದ ವಶಪಡಿಸಿಕೊಂಡದ್ದು ಎಂಬುದನ್ನು ರುಜು ಮಾಡಲು ಸರ್ಕಾರ ಒಬ್ಬ ಸಿವಿಲ್ ಜಿಲ್ಲಾ ನ್ಯಾಯಾಧೀಶರನ್ನೂ, ಒಬ್ಬ ಸೈನ್ಯಾಧಿಕಾರಿಯನ್ನೂ ಹಾಜರುಪಡಿಸಿದರು. ಆದರೆ ಇವರಿಬ್ಬರೂ ಸೈನ್ಯಾಧಿಕಾರಿ ನ್ಯಾಯಾಲಯದಲ್ಲಿ ಇದನ್ನು ನಿರಾಕರಿಸಿದರು. ಈ ಲೇಖನಗಳನ್ನು ನಮ್ಮ ಹಾಜರಿಯಲ್ಲಿ ವಶಪಡಿಸಿಕೊಂಡಿಲ್ಲವೆಂದು ಹೇಳಿದರು. ಪೋಲೀಸರ ಒತ್ತಾಯದ ಕಾರಣ ಎಫ್.ಪಿ.ಆರ್.ನಲ್ಲಿ ಗುರ್ತಿಸಿದೆಯಷ್ಟೆ ಎಂದು ನ್ಯಾಯಾಲಯದಲ್ಲಿ ಹೇಳಿದರು.

ಸೈನಿಕ ನ್ಯಾಯಾಲಯವು ಮೊಕದ್ದಮೆಯನ್ನು ಸ್ವಲ್ಪ ಕಾಲ ಮುಂದುವರಿಸಿತು. ಆದರೆ ಅವರ ಮೇಲೆ ಹೊರಿಸಿದ್ದ ಯಾವುದೇ ಆರೋಪವನ್ನಾಗಲಿ ರುಜು ಮಾಡಲು ಆಗಲಿಲ್ಲ. ಆದರೂ ಬಂಧನದಲ್ಲಿಟ್ಟಿದ್ದ ಕಮ್ಯೂನಿಸ್ಟ್ ಮುಖಂಡರ ಮೇಲಿನ ದಬ್ಬಾಳಿಕೆಗೆ ಯಾವ ಕಡಿಮೆಯೂ ಇರಲಿಲ್ಲ. ಬಂಧಿಸಿದ ಮುಖಂಡರನ್ನೆಲ್ಲಾ ಪ್ರತ್ಯೇಕವಾದ ಕೊಠಡಿಯಲ್ಲಿಟ್ಟು ಪೀಡಿಸುತ್ತಿದ್ದರು. ಅದರ ಫಲವಾಗಿ ಐವತ್ತೆರಡು ವರ್ಷದ ಪ್ರೊಫೆಸರ್ ಜಮಾಲ್ ನಖ್ವಿಗೆ ಮೆದುಳಿನಲ್ಲಿ ರಕ್ತ ಹೆಪ್ಪುಕಟ್ಟಿತು. 1982ರಲ್ಲಿ ಅವರನ್ನು ತಾತ್ಕಾಲಿಕವಾಗಿ ಬಂಧನದಿಂದ ಬಿಡುಗಡೆ ಮಾಡಲಾಯಿತು.

ಸರ್ಕಾರವು ಹಾಜರುಪಡಿಸಿದ ಸಾಕ್ಷಿಗಳು, ರುಜುಗಳು, ಕಮ್ಯೂನಿಸ್ಟರ ಮೇಲೆ ಆರೋಪಿಸಿದ ಪಿತೂರಿಗೆ ಅವಶ್ಯಕವಾದ ಶಿಕ್ಷೆಯನ್ನು ವಿಧಿಸಲು ಸಾಕಾಗಿರಲಿಲ್ಲ. ಹಾಗಿದ್ದ ಮೇಲೆ ಅವರ ಮೇಲೆ ದೇಶದ್ರೋಹದ ತಪ್ಪನ್ನು ಹೇಗೆ ಆರೋಪಿಸಲು ಸಾಧ್ಯ? ನ್ಯಾಯಾಲಯದಲ್ಲಿ ವಿಚಾರಣೆಯ ಸಂದರ್ಭದಲ್ಲಿ ಪಾಕಿಸ್ತಾನದ ಸಂವಿಧಾನವೇನು ಎಂದು ಜಾಂಸಾಕಿಯವರು ಕೇಳಿದ ಪ್ರಶ್ನೆಗೆ ಸರ್ಕಾರದ ವಕೀಲರಿಗೆ ಉತ್ತರ ಕೊಡಲು ಕಷ್ಟವಾಯಿತು. ಸರ್ಕಾರ ಕೋಮ್ (ಸಮುದಾಯ, ರಾಷ್ಟ್ರ) ಎಂಬ ಪದಕ್ಕೆ ಕೊಟ್ಟ ಅರ್ಥವನ್ನು ಸವಾಲು ಮಾಡಿ ಖುರಾನ್ ಗ್ರಂಥದಲ್ಲಿನ ವಾಕ್ಯವನ್ನು ವಿವರಿಸಿ, ಪುಣ್ಯ ಖುರಾನಿನಲ್ಲಿ 'ಕೋಮ್' ಎಂಬ ವಾಕ್ಯ ಮುನ್ನೂರ ಮೂರು ಕಡೆಗಳಲ್ಲಿ ವಿವರಿಸಿದೆ. ಆದರೆ ಪಾಕಿಸ್ತಾನ್ ಸೈನ್ಯಾಧಿಕಾರಿಗಳು ಕೊಟ್ಟ ಅರ್ಥದಲ್ಲಿ ಆ ವಾಕ್ಯವನ್ನು ಎಲ್ಲೂ ಉಪಯೋಗಿಸಲಿಲ್ಲ.

ಪ್ರೊಫೆಸರ್ ಜಮಾಲ್ ನಖ್ವಿ ನ್ಯಾಯಾಲಯದಲ್ಲಿ ಕೊಟ್ಟ ಹೇಳಿಕೆಯಲ್ಲಿ ಪಾಕಿಸ್ತಾನದ ಸ್ಥಾಪಕನಾದ ಕ್ವಾಯಿದೆ ಆಜಮ್ ಮೊಹಮದ್ ಆಲಿ ಜಿನ್ನಾರವರು ಪಾಕಿಸ್ತಾನ್ ಜನರಲ್ ಅಸೆಂಬ್ಲಿಯಲ್ಲಿಮಾಡಿದ ಪ್ರಥಮ ಭಾಷಣದಲ್ಲಿ ಪಾಕಿಸ್ತಾನದ ಧೋರಣೆಯನ್ನು ಹೀಗೆ ವಿವರಿಸಿದ್ದಾರೆ. "ಪಾಕಿಸ್ತಾನವು ಯಾವುದೇ ಮತದ ಮಾತ್ರ ರಾಷ್ಟ್ರವಾಗಿರುವುದಿಲ್ಲ. ಪಾಕಿಸ್ತಾನ್ ಜಾತ್ಯಾತೀತ ರಾಷ್ಟ್ರವಾಗಿರುತ್ತದೆ. ನೀವು ಯಾವುದೇ ಮತದವರಾಗಿರಲಿ, ಸಮುದಾಯದವರಾಗಿರಲಿ, ಬುಡಕಟ್ಟು ಜನಾಂಗದವರಾಗಿರಲಿ ರಾಷ್ಟ್ರದ ಚಟುವಟಿಕೆಯಲ್ಲಿ ಅದಕ್ಕೆ ಯಾವುದೇ ಸಂಬಂಧವಿರುವುದಿಲ್ಲ. ಪಾಕಿಸ್ತಾನಿ ನಾಗರೀಕನೆಂಬುದೆ ನಮ್ಮ ಧ್ಯೇಯ. ಪ್ರತಿಯೊಬ್ಬ ನಾಗರೀಕನೂ ತನಗೆ ಇಷ್ಟವಿದ್ದ ಮತದಲ್ಲಿ ನಂಬಿಕೆ ಇಡುವುದಕ್ಕೆ ಮತ್ತು ರಾಜಕೀಯ ಸಿದ್ಧಾಂತವನ್ನು ಅನುಸರಿಸಲು ಅವನಿಗೆ ಪೂರ್ಣವಾದ ಹಕ್ಕಿರುತ್ತದೆ."

ಜಿನ್ನಾರ ಈ ವಾಕ್ಯವನ್ನು ಉದ್ಧರಿಸಿ ಪ್ರೊಫೆಸರ್ ನಖ್ವಿ ಈಗಿನ ಆಡಳಿತ ವರ್ಗದ ಧೋರಣೆಯನ್ನು ಟೀಕಿಸಿ ಬಯಲು ಮಾಡಿದರು.

ಅಲ್ಲಾಹುವಿನ ರಾಜ್ಯವಾದ ಪಾಕಿಸ್ತಾನದಲ್ಲೂ ವಿದೇಶಿ ರಾಜಕೀಯ ತತ್ವವಿಚಾರವನ್ನು ಪ್ರಚಾರ ಮಾಡಲು ಯತ್ನಿಸಿದೆಯೆಂಬುದೆ ಕಮ್ಯೂನಿಸ್ಟ್ ಮುಖಂಡರುಗಳ ಮೇಲಿನ ಮುಖ್ಯ ಆಪಾದನೆ. ಇದಕ್ಕೆ ಜಾಂಸಾಕಿ ನ್ಯಾಯಾಲಯದಲ್ಲಿ ಹೀಗೆ ಉತ್ತರ ಕೊಟ್ಟರು.

"ಕೆಲವು ಸಂದರ್ಭಗಳಲ್ಲಿ ಆಡಳಿತ ವರ್ಗವು ವಿದೇಶಿ ತತ್ವ ವಿಚಾರದ ಬಗ್ಗೆ ಟೀಕೆ ಮಾಡುತ್ತಿದ್ದಾರೆ. ಆದರೆ ಅವರು ಅದರ ನಿಜಾಂಶವನ್ನು ಮರೆತು ಬಿಟ್ಟಿದ್ದಾರೆ. ಇಸ್ಲಾಂ ಪ್ರಾದೇಶಿಕ ಮತವಲ್ಲವೆಂಬುದು ಅವರು ನೆನಪಿಡಬೇಕು. ಯಾವುದೇ ಭಾಗದಿಂದ ಬಂದ ತತ್ವವಿಚಾರವಾಗಲಿ ಅದು ಪೂರ್ಣವಾಗಿ ಮಾನವೀಯ ನಿದರ್ಶನಗಳನ್ನು ಕೊಡುವುದಾಗಿದೆ."

ಬಂಧನಕ್ಕೊಳಗಾದ ಪ್ರತಿಯೊಬ್ಬರೂ ತಾವು ಕಮ್ಯೂನಿಸ್ಟರೆಂದು ಹೇಳಿಕೊಳ್ಳುವುದರಲ್ಲಿ ಹೆಮ್ಮೆಪಡುತ್ತೇವೆ ಎಂದು ನ್ಯಾಯಾಲಯದಲ್ಲಿ ಆಗಲೇ ಹೇಳಿಕೆ ಕೊಟ್ಟಿದ್ದಾರೆ. ಇದರಿಂದ ಆತುರಗೊಂಡ ಪಾಕಿಸ್ತಾನ್ ಸೈನ್ಯಾಧಿಕಾರಿಗಳು ಬೇರೆ ಉಪಾಯವನ್ನು ಹುಡುಕಿದರು. ಪಾಕಿಸ್ತಾನದ ಇತರ ರಾಜಕೀಯ ಪಕ್ಷಗಳ ಮುಖಂಡರುಗಳನ್ನು ಸಾಕ್ಷಿಗಳಾಗಿ ನ್ಯಾಯಾಲಯದಲ್ಲಿ ವಿಚಾರಣೆ ಮಾಡಬೇಕೆಂಬ ಉದ್ದೇಶಕ್ಕೆ ಬಂದರು. ಸಾಕ್ಷಿಗಳ ಪಟ್ಟಿಯಲ್ಲಿ ಎಡಪಂಥೀಯ ರಾಜಕೀಯ ಪಕ್ಷಗಳ ಮುಖಂಡರುಗಳು ಮತ್ತು ಖಾನ್ ಅಬ್ದುಲ್ ಗಫಾರ್ ಖಾನಿನ ಪುತ್ರ ಖಾನ್ ಅಬ್ದುಲ್ ವಾಲೀಖಾನ್ ಹಾಗೂ ಭುಟ್ಟೋರವರ ಪುತ್ರಿ ಬೆನಜೀರರನ್ನೂ ಸೇರಿಸಿದರು.

ಫೆಬ್ರುವರಿ ಎರಡನೆಯ ವಾರದಲ್ಲಿ ಖಾನ್ ಅಬ್ದುಲ್ ವಾಲಿಖಾನ್ ಸಾಕ್ಷ್ಯ ಹೇಳಲು ನ್ಯಾಯಾಲಯಕ್ಕೆ ಹಾಜರಾದರು. ವಾಲಿಖಾನರಿಗೆ ನಾಲ್ಕು ದಿನಗಳ ಕಾಲ ಮಾತ್ರ ಕರಾಚಿಯಲ್ಲಿ ನೆಲಸಲು ಅವಕಾಶ ಕೊಟ್ಟರು.

ವಾಲಿಖಾನ್ ವಿಶೇಷ ನ್ಯಾಯಾಲಯದಲ್ಲೂ ಈ ರೀತಿ ಹೇಳಿಕೆ ಕೊಟ್ಟರು. "ಅಸ್ತಿತ್ವದಲ್ಲಿರುವ ಆಡಳಿತ ವರ್ಗವನ್ನೂ, ಸೈನ್ಯಾಧಿಕಾರವನ್ನೂ ಟೀಕೆ ಮಾಡುವುದು ಪಾಕಿಸ್ತಾನ್ ಸೈನ್ಯವನ್ನು ಟೀಕೆ ಮಾಡುವುದಾಗಿ ಅಂಗೀಕರಿಸಲಾಗುವುದಿಲ್ಲ. ಜಾಂಸಾಕಿಯ ಮೇಲೆ ಆರೋಪಿಸಿದ ಆಪಾದನೆ ಆತ ಪಾಕಿಸ್ತಾನ್‌ಸಂವಿಧಾನವನ್ನು ವಿರೋಧ ಮಾಡುತ್ತಿದ್ದಾರೆ ಎಂಬುದು. ಇದೇ ಆರೋಪವನ್ನು ಹೈದರಾಬಾದ್ ಟ್ರಿಬ್ಯುನಲ್ ಮುಂದೆ ನನ್ನ ಮೇಲೂ ಆಪಾದಿಸಿದ್ದರು. ಆ ಮೊಕದ್ದಮೆಯಲ್ಲಿ ನಾನು ಪಾಕಿಸ್ತಾನದ ತತ್ವಸಂಹಿತೆಯನ್ನು ಸ್ಪಷ್ಟಪಡಿಸಲು ಹೇಳಿದ್ದೆ. ಆದರೆ ಅದಕ್ಕೆ ಸರ್ಕಾರದ ವಕೀಲರು ಅದನ್ನು ವಿವರಿಸಲು ಸಾಧ್ಯವಿಲ್ಲವೆಂದು ಹೇಳಿದರು. ಆಗ ನಾನು ಶರಿಫುದ್ದೀನ್ ಫಿರ್‌ಜ್ವಾದ್ ಬರೆದ ಪುಸ್ತಕವನ್ನು ನ್ಯಾಯಾಲಯದಲ್ಲಿ ಹಾಜರುಪಡಿಸಿದೆ. ಅದರಲ್ಲೂ ಕ್ವಾಯಿದೆ ಆಜಂ ಜನರಲ್ ಅಸೆಂಬ್ಲಿಯಲ್ಲಿ ಪ್ರಥಮ ಬಾರಿ ಮಾಡಿದ ಭಾಷಣವನ್ನು ಉದ್ಧರಿಸಿದೆ" ನಮ್ಮಲ್ಲಿ ಯಾರೂ ಹಿಂದುವಾಗಲಿ, ಮುಸ್ಲಿಮರಾಗಲಿ ಇಲ್ಲ. ಎಲ್ಲರೂ ಪಾಕಿಸ್ತಾನಿಗಳು ಮಾತ್ರ ಎಂಬುವೇ ಅದು. ಮತ್ತೆ ಸೈನ್ಯಾಧಿಕಾರವನ್ನು, ಜಿಯಾವುಲ್‌ಹಖ್‌ನ್ನು ವಿರೋಧ ಮಾಡುವ ಪ್ರಶ್ನೆಯಾದರೆ ಈ ದೇಶದ ಪ್ರಜಾಪ್ರಭುತ್ವವಾದಿಗಳೆಲ್ಲರೂ ಈ ಮಿಲಿಟರಿ ಸರ್ವಾಧಿಕಾರವನ್ನು ವಿರೋಧ ಮಾಡುತ್ತಿದ್ದಾರೆ. ಆಡಳಿತ ವರ್ಗ ಅವರ ಮೇಲೆ ಮೊಕದ್ದಮೆ ಹೂಡಲಿ.

ಈ ಮೊಕದ್ದಮೆಯ ಎರಡನೆ ಸಾಕ್ಷಿ ಬೆನಜೀರ್ ಭುಟ್ಟೋ ಆಗಿತ್ತು. ಅವರನ್ನು 1981ರಿಂದ ಬಂಧನದಲ್ಲಿಟ್ಟಿದ್ದಾರೆ. ಅವರನ್ನು ಅಮಾನುಷವಾಗಿ ಮರ್ಧಿಸಿದ ಫಲವಾಗಿ ಮೃತಪ್ರಾಯವಾಗಿದ್ದ ಅವರನ್ನು ಕರಾಚಿಯ ಒಂದು ಆಸ್ಪತ್ರೆಯಲ್ಲಿ ಶಸ್ತ್ರಚಿಕಿತ್ಸೆ ಮಾಡಬೇಕಾಗಿ ಬಂತು. ಅವರು ತಮ್ಮ ಆರೋಗ್ಯವನ್ನು ಸ್ವಲ್ಪ ಮಟ್ಟಿಗೆ ಸುಧಾರಿಸಿಕೊಂಡ ನಂತರ 1983 ಫೆಬ್ರುವರಿ ತಿಂಗಳು 27ರಂದು ನ್ಯಾಯಾಲಯದಲ್ಲಿ ಸಾಕ್ಷ್ಯ ಹೇಳಲು ಸೈನ್ಯಾಧಿಕಾರಿಗಳು ಹಾಜರುಪಡಿಸಿದರು.

ಬೇನಜೀರ್ ಮಿಲಿಟರಿ ಸರ್ವಾಧಿಕಾರಿ ನ್ಯಾಯಾಲಯದಲ್ಲಿ ಕೊಟ್ಟ ಹೇಳಿಕೆಯಲ್ಲಿ ಜಾಂಸಾಕಿ ಮತ್ತು ಇತರ ಕಮ್ಯೂನಿಸ್ಟ್ ಮುಖಂಡರ ಮೇಲಿನ ಆರೋಪಣೆ ಅವರು ಪಾಕಿಸ್ತಾನ್ ತತ್ವಸಂಹಿತೆಗೆ ವಿರುದ್ಧವಾಗಿ ವರ್ತಿಸಿದೆ ಎಂಬುದು. ಆದರೆ ಈ ಸರ್ಕಾರ ಅಸ್ತಿತ್ವದಲ್ಲಿರುವುದೇ ಪಾಕಿಸ್ತಾನ್ ರಾಷ್ಟ್ರದ ತತ್ವಸಂಹಿತೆಗೆ ವಿರುದ್ಧವಾಗಿ ಪಾಕಿಸ್ತಾನದಲ್ಲಿ ಇಸ್ಲಾಂ ಮತದವರು ಬಹುಸಂಖ್ಯಾತರಿರಬಹುದು. ಆದರೆ ಈ ದೇಶದಲ್ಲಿರುವ ಪ್ರತಿಯೊಬ್ಬರೂ ಇಸ್ಲಾಂ ಮತದವರಾಗಿರಬೇಕೆಂದು ಯಾವ ಕಾನೂನು ಹೇಳುತ್ತಿಲ್ಲ. ಜಿಯಾವುಲ್ ಹಖ್ಖಿನ ಇಸ್ಲಾಂ ವಿರುದ್ಧ ಧೋರಣೆಯನ್ನು ಬಯಲುಮಾಡಿ ಅವರು ಮುಂದುವರಿದು "ಇಸ್ಲಾಂ ಮತದಲ್ಲಿ ಮಿಲಿಟರಿ ಸರ್ವಾಧಿಕಾರಕ್ಕೆ ಯಾವ ಸ್ಥಾನವೂ ಇಲ್ಲ. ಇಸ್ಲಾಂ ದೇಶದ ಮುಂದೆ ತಲೆ ಬಗ್ಗಿಸಲು ಮಾತ್ರ ಹೇಳಿದೆ. ಆದರೆ ಈ ಮಿಲಿಟರಿ ಸರ್ವಾಧಿಕಾರಿಗಳು ಇಸ್ಲಾಂ ಮತದವರನ್ನು ಸೈನ್ಯಾಧಿಕಾರಿಗಳ ಮುಂದೆ ತಲೆಬಗ್ಗಿಸುವಂತೆ ಮಾಡಿದೆ."

ಜನರಲ್ ಜಿಯಾವುಲ್ ಹಖ್‌ನ ಧೋರಣೆಯನ್ನು ಈ ರೀತಿ ಬಯಲು ಮಾಡುತ್ತಾ ಬೇನಜೀರ್ ಹೇಳಿದರು "ಜನರಲ್ ಜಿಯಾ ಅಫ್ಘಾನಿಸ್ತಾನ್ ಜನತೆಯ ಸ್ವಾಯತ್ತತೆ ಬಗ್ಗೆ ವಾದಿಸುತ್ತಾರೆ. ಅದೇ ಸಮಯ ಆ ಹಕ್ಕನ್ನು ಪಾಕಿಸ್ತಾನ್ ಜನತೆಗೆ ನಿಷೇಧಿಸುತ್ತಿದ್ದಾರೆ."

ಬೇನಜೀರ್ ಭುಟ್ಟೋರವರ ಸಾಕ್ಷ್ಯವನ್ನು ಪೂರ್ತಿಗೊಳಿಸುವ ಮೊದಲೇ ಮಿಲಿಟರಿ ಸರ್ವಾಧಿಕಾರಿ ಸರ್ಕಾರವು ಕಮ್ಯೂನಿಸ್ಟ್ ಮುಖಂಡರ ಮೇಲೆ ಹೂಡಿದ ಈ ಮೊಕದ್ದಮೆಯನ್ನು ಯಾವುದಾದರೊಂದು ರೀತಿಯಲ್ಲಿ ಮುಗಿಸಬೇಕೆಂದು ನಿರ್ಧರಿಸಿದ್ದಾರೆ. ತಪ್ಪಿತಸ್ಥರೆಂದು ಹೇಳಿ ಕಮ್ಯೂನಿಸ್ಟ್ ಮುಖಂಡರನ್ನು ಬಂಧಿಸಿ ನ್ಯಾಯಾಲಯದಲ್ಲಿ ಹಾಜರುಪಡಿಸಿದ ಸರ್ವಾಧಿಕಾರಿ ಸರ್ಕಾರ ತಾವೇ ತಪ್ಪಿತಸ್ಥರಾಗಿರುವ ಸ್ಥಿತಿಯು ಸಂಜಾತವಾಗಿದೆ.

'ದೇಶಾಭಿಮಾನಿ' ಪತ್ರಿಕೆಯಿಂದ

ಎಂ. ದಾಮು

ನಿವೇಶನ ರಹಿತ ಬಡವರ ಹೋರಾಟಕ್ಕೆ ಬೆಂಬಲ

ಮಂಗಳವಾರ ದಿ. 26-4-83 ರಿಂದ ಸವದತ್ತಿ ತಹಸೀಲ್ದಾರರ ಕಛೇರಿಯ ಎದುರು ಆರಂಭ ಮಾಡಿರುವ ಹಂಚಿನಾಳ ಗ್ರಾಮದ ಮನೆಯಿಲ್ಲದ ಲಂಬಾಣಿ ಹಾಗೂ ಹರಿಜನ ಬಂಧುಗಳ ಅನಿರ್ದಿಷ್ಟ ಅವಧಿಯ **ಸರದಿ ಅನ್ನ ಸತ್ಯಾಗ್ರಹಕ್ಕೆ** ಭಾರತ ವಿದ್ಯಾರ್ಥಿ ಫೆಡರೇಶನ್ ಸವದತ್ತಿ ಘಟಕವು ತನ್ನ ಸಂಪೂರ್ಣ ಬೆಂಬಲವನ್ನು ನೀಡಿದೆ. ಕಳೆದ ಐದು ವರ್ಷಗಳಿಂದ ಮನೆಗಳನ್ನು ಕಟ್ಟಿಸಿಕೊಂಡು ಸರ್ಕಾರಕ್ಕೆ ಮನವಿ ಮಾಡಿಕೊಳ್ಳುತ್ತಾ ಬಂದಿರುವ ಈ ಗುಡಿಸಲು ವಾಸಿಗಳಿಗೆ ಇಲ್ಲಿಯವರೆಗೆ ನಿವೇಶನಗಳನ್ನು ಹಂಚದಿರುವದನ್ನು ಖಂಡಿಸುವ ಜೊತೆಗೆ ಸರ್ಕಾರವು ಕೂಡಲೇ ಈ ನಿರ್ಗತಿಕರ ನೆರವಿಗೆ ಬರಬೇಕೆಂದು ಎಸ್. ಎಫ್. ಐ. ಘಟಕದ ಅಧ್ಯಕ್ಷ ಸುರೇಶ ಮಂಟಗೋಡಿ ಇವರು ಪ್ರಕಟಣೆಯೊಂದರಲ್ಲಿ ಸರ್ಕಾರವನ್ನು ಒತ್ತಾಯಿಸಿದ್ದಾರೆ.

ಅಸ್ಸಾಂ - ಎಸ್.ಎಫ್.ಐ. ಕಾರ್ಯಕರ್ತರಿಬ್ಬರ ಕೊಲೆಗೆ ಖಂಡನೆ

ಏಪ್ರಿಲ್ 25 ರಂದು ನವದೆಹಲಿಯಲ್ಲಿ ನೀಡಿರುವ ಪತ್ರಿಕಾ ಹೇಳಿಯೊಂದರಲ್ಲಿ ಸ್ಟೂಡೆಂಟ್ಸ್ ಫೆಡರೇಶನ್ ಆಫ್ ಇಂಡಿಯಾದ ಅಧ್ಯಕ್ಷರಾದ ಕಾ. ಎಂ. ಎ. ಬೇಬಿ ಮತ್ತು ಪಾರ್ಲಿಮೆಂಟ್ ಸದಸ್ಯರೂ ಎಸ್.ಎಫ್.ಐ.ನ ಕಾರ್ಯಕಾರೀ ಸಮಿತಿ ಸದಸ್ಯರೂ ಆಗಿರುವ ಕಾ. ಸೈಫುದ್ದೀನ್ ಚೌಧುರಿ ಅವರು, ಏಪ್ರಿಲ್ 19 ರಂದು SFI ಕಾರ್ಯಕರ್ತರಾದ ಅನಿಲ್ ಪಾಠಕ್ ಮತ್ತು ಕೈಲಾಸ್ ಶರ್ಮ ರವರನ್ನು ಅಖಿಲ ಅಸ್ಸಾಂ ವಿದ್ಯಾರ್ಥಿ ಸಂಘದ ಗೂಂಡಾಗಳು ಕ್ರೂರವಾಗಿ ಕೊಲೆ ಮಾಡಿರುವುದನ್ನು ಖಂಡಿಸಿದ್ದಾರೆ.

ಅಖಿಲ ಅಸ್ಸಾಂ ವಿದ್ಯಾರ್ಥಿ ಸಂಘ ಮತ್ತು ಅಖಿಲ ಅಸ್ಸಾಂ ಗಣ ಸಂಗ್ರಾಮ್ ಪರಿಷತ್‌ಗಳು ಅಸ್ಸಾಂನಲ್ಲಿ ಚಳವಳಿಯನ್ನು ಪ್ರಾರಂಭಿಸಿದಾಗಿನಿಂದಲೂ SFI ಚಳವಳಿಗಾರರ ಆಕ್ರಮಣದ ಮುಖ್ಯ ಗುರಿಯಾಗಿದೆ. ಇಲ್ಲಿಯವರೆಗೆ SFIನ ಹತ್ತು ಪ್ರಮುಖ ಮುಂದಾಳುಗಳನ್ನು ಭೀಕರವಾಗಿ ಕೊಲೆ ಮಾಡಲಾಗಿದೆ. ಅನೇಕ ಕಾರ್ಯಕರ್ತರನ್ನು ಕ್ರೂರ ಹಿಂಸೆಗೆ ಗುರಿಪಡಿಸಲಾಗಿದೆ, ನೂರಾರು ಮಂದಿಯನ್ನು ಅವರ ಮನೆಗಳಿಂದಲೂ, ಪ್ರದೇಶಗಳಿಂದಲೂ ಹೊರ ಹಾಕಲಾಗಿದೆ. ಈಗ ನಿರಾಶರಾಗಿರುವ ಚಳವಳಿಕಾರರು ಹೇಡಿತನದಿಂದ ಕೂಡಿದ ವೈಯಕ್ತಿಕ ಕೊಲೆಗಳನ್ನು ನಡೆಸಲು ಆರಂಭಿಸಿದ್ದಾರೆ ಏಕೆಂದರೆ ಅವರಲ್ಲಿ ಒಂಟಿತನದ ಭಾವನೆ ಹೆಚ್ಚಾಗಿ ಬೆಳೆದಿದೆಯೆಂದು ಪ್ರಕಟನೆ ತಿಳಿಸಿದೆ.

ಪ್ರಜಾಪ್ರಭುತ್ವವಾದೀ ಜನತೆಯ ಮೇಲೆ ನಡೆಯುತ್ತಿರುವ ಈ ಕೊಲೆಗಳನ್ನು ಭಾರತದ ವಿದ್ಯಾರ್ಥಿ ವರ್ಗ ಖಂಡಿಸಬೇಕೆಂದು ಪತ್ರಿಕಾ ಹೇಳಿಕೆಯಲ್ಲಿ ವಿನಂತಿಸಲಾಗಿದೆ.

ಕನಕಪುರ

ಹೆಗ್ಗಡೆಯವರನ್ನು ಬೆಂಬಲಿಸಿ ಸಿ. ಪಿ. ಐ. (ಎಂ) ನ ಪ್ರಚಾರ

ಇದೇ ತಿಂಗಳು 15ರಂದು ಕನಕಪುರ ಕ್ಷೇತ್ರದಲ್ಲಿ ನಡೆಯಲಿರುವ ವಿಧಾನ ಸಭಾ ಚುನಾವಣೆಯಲ್ಲಿ ಜನತಾ ಪಕ್ಷದ ಅಭ್ಯರ್ಥಿಯಾಗಿ ಸ್ಪರ್ಧಿಸಿರುವ ಕರ್ನಾಟಕದ ಮುಖ್ಯಮಂತ್ರಿ ಶ್ರೀ ರಾಮಕೃಷ್ಣ ಹೆಗಡೆಯವರನ್ನು ಬೆಂಬಲಿಸಿ ದಿನಾಂಕ 11-5-83ರಂದು ಕನಕಪುರದಲ್ಲಿ ಸಿ.ಪಿ.ಐ.(ಎಂ) ಮತ್ತು ಸಿ. ಐ. ಟಿ. ಯು. ಕಾರ್ಯಕರ್ತರು ಬೃಹತ್ ಚುನಾವಣಾ ಪ್ರಚಾರ ಸಭೆಯನ್ನು ನಡೆಸಿದರು.

11ರ ಬೆಳಿಗ್ಗೆ ಬೆಂಗಳೂರಿನಿಂದ ವಿಶೇಷ ಬಸ್ಸಿನಲ್ಲಿ ಕನಕಪುರಕ್ಕೆ ಹೊರಟ ಸಿ. ಪಿ. ಐ.(ಎಂ) ಮತ್ತು ಸಿ. ಐ. ಟಿ. ಯು. ಕಾರ್ಯಕರ್ತರುಗಳು ಸುರಿಯುವ ಮಳೆಯನ್ನು ಲೆಕ್ಕಿಸದೆ ಹಲವಾರು ಗಂಟೆಗಳ ಕಾಲ ಕನಕಪುರದ ಬೀದಿಗಳಲ್ಲಿ ಹೆಗ್ಡೆಯವರ ಪರವಾಗಿ ನಡೆಸುತ್ತಿದ್ದ ಮೆರವಣಿಗೆಯು ಅಲ್ಲಿನ ಜನತೆಯನ್ನು ವಿಸ್ಮಯಗೊಳಿಸುವುದರೊಂದಿಗೆ ಸ್ಫೂರ್ತಿಯನ್ನು ತುಂಬಿತು.

ಅದೇ ದಿನ ಸಂಜೆ ಕನಕಪುರದಲ್ಲಿ ನಡೆದ ಬೃಹತ್ ಸಾರ್ವಜನಿಕ ಸಭೆಯ ಅಧ್ಯಕ್ಷತೆಯನ್ನು ಕರ್ನಾಟಕ ಪ್ರಾಂತ ರೈತ ಸಂಘದ ಮುಖಂಡರಾದ ಕಾ। ಕಾ। ಪಿ. ಜಗನ್ನಾಥ್ ವಹಿಸಿದ್ದರು. ಶಿವರಾಂ ಅವರು ಸ್ವಾಗತಿಸಿದರು. ಬಹಿರಂಗಸಭೆಯನ್ನುದ್ದೇಶಿಸಿ ಸಿ. ಐ. ಟಿ. ಯು. ಕರ್ನಾಟಕ ರಾಜ್ಯ ಸಮಿತಿಯ ಅಧ್ಯಕ್ಷರಾದ ಹಾಗೂ ಶಾಸಕರಾದ ಕಾ। ಎಸ್. ಸೂರ್ಯನಾರಾಯಣರಾವ್, ಕಾ। ಆರ್. ಶ್ರೀನಿವಾಸ್ ಮುಂತಾದವರು ಮಾತನಾಡಿದರು.

ರಾಜ್ಯದ ಅಧಿಕಾರವನ್ನು ಮತ್ತೊಮ್ಮೆ ಕಬಳಿಸಲು ಸರ್ವ ಪ್ರಯತ್ನ ನಡೆಸುತ್ತಿರುವ ಕಾಂಗ್ರೆಸ್ (ಐ)ನ ಸರ್ವಾಧಿಕಾರೀ ಶಕ್ತಿಗಳು ತಲೆಯೆತ್ತದಂತೆ ಮಾಡಲು ಈ ಚುನಾವಣೆ ಅವಕಾಶವನ್ನು ಮಾಡಿಕೊಟ್ಟಿರುವುದಾಗಿಯೂ, ಅದನ್ನು ಜನತೆ ಬಳಸಿಕೊಂಡು ಕಾಂಗ್ರೆಸ್ (ಐ)ಅನ್ನು ಸಂಪೂರ್ಣವಾಗಿ ಸೋಲಿಸಿ ಹೆಗಡೆಯವರನ್ನು ಚುನಾಯಿಸಬೇಕೆಂದು ಭಾಷಣಕಾರರು ಮತದಾರರಲ್ಲಿ ವಿನಂತಿಸಿಕೊಂಡರು.

ಈ ಚುನಾವಣೆಯು ಜನತಾ ಸರ್ಕಾರದ ಅಳಿವು-ಉಳಿವಿನ ಪ್ರಶ್ನೆಯಾಗಬಹುದಾದಷ್ಟು ಮಹತ್ವವನ್ನು ಪಡೆದುಕೊಂಡಿದೆ. ಮತದಾರರು ಜನತಾ ಸರ್ಕಾರದ ಸಾಧನೆಗಳನ್ನು, ಅವು ಸಣ್ಣ ಪ್ರಮಾಣದವೇ ಆಗಿದ್ದರೂ ಕೂಡ ಗಮನದಲ್ಲಿರಿಸಿಕೊಂಡು ಪ್ರಜ್ಞಾವಂತರಾಗಿ ಮತ ನೀಡಬೇಕೆಂದು ಸಭೆಯಲ್ಲಿ ಕೇಳಿಕೊಳ್ಳಲಾಯಿತು.

ಬಹಿರಂಗ ಸಭೆಗೆ ಸುಮಾರು 3 ಸಾವಿರ ಮಂದಿ ನೆರೆದಿದ್ದರು.

ಭಾರತ ವಿದ್ಯಾರ್ಥಿ ಫೆಡರೇಶನ್ನಿನ ರಾಜ್ಯ ಪ್ರಧಾನ ಕಾರ್ಯದರ್ಶಿ ಕಾ। ಎಸ್. ಆರ್. ಆರಾಧ್ಯ ಅವರು ವಂದನಾರ್ಪಣೆ ಸಲ್ಲಿಸಿದರು.

ದಿ. 10-5-1983ರಂದು ಹಾರೋಹಳ್ಳಿಯಲ್ಲಿ ರೈತ ಸಂಘದ ಆಶ್ರಯದಲ್ಲಿ ಬಹಿರಂಗ ಸಭೆ ನಡೆದು ಕನಕಪುರ ಚುನಾವಣೆಯಲ್ಲಿ ಹೆಗ್ಡೆಯವರ ಪರವಾಗಿ ಪ್ರಚಾರ ನಡೆಸಲಾಯಿತು.

ಸಭೆಯನ್ನು ಉದ್ದೇಶಿಸಿ ರೈತ ಮುಖಂಡರಾದ ಕಾ। ಪಿ. ಜಗನ್ನಾಥ್ ಶಾಸಕರೂ, ಸಿ. ಪಿ. ಐ.(ಎಂ)ನ ಮುಖಂಡರೂ ಆದ ಕಾ। ಎಸ್. ಸೂರ್ಯನಾರಾಯಣರಾವ್, ವಿದ್ಯಾರ್ಥಿ ಮುಖಂಡರಾದ ಕಾ। ಎಸ್. ಆರ್. ಆರಾಧ್ಯ ಮತ್ತು ವಕೀಲರಾದ ಕಾ। ಗೋಪಾಲಗೌಡ ಮುಂತಾದವರು ಮಾತನಾಡಿದರು.

ಬೆಂಗಳೂರು ಜಿಲ್ಲಾ ರೈತ ಸಂಘದ ಕಾರ್ಯದರ್ಶಿ ಲಕ್ಕಣ್ಣ ವಂದನಾರ್ಪಣೆ ಮಾಡಿದರು.

ಗುಡಿಬಂಡೆ ರೈತ ಸಂಘದ ಚಟುವಟಿಕೆಗಳು

ದಿನಾಂಕ 4-5-83 ರಂದು ಕೋಲಾರ ಜಿಲ್ಲೆಯ ಗುಡಿಬಂಡೆ ತಾಲ್ಲೂಕಿನ ಕೆರುಮಣಿ ಪಂಚಾಯ್ತಿ ಗ್ರೂಪ್ ರೈತ ಸಂಘದ ಸಭೆ ನಡೆದು ಈ ಪಂಚಾಯ್ತಿಯಲ್ಲಿ ರೈತಸಂಘಕ್ಕೆ 500 ಸದಸ್ಯರನ್ನು ನೊಂದಾಯಿಸಲು ತೀರ್ಮಾನಿಸಲಾಯಿತು. ಇದಕ್ಕೆ ಮೊದಲು ಸುತ್ತಮುತ್ತಲಿನ ಹಳ್ಳಿಗಳಿಂದ ಬಂದಿದ್ದ ರೈತರ ಸಭೆಯನ್ನು, ಉದ್ದೇಶಿಸಿ ಕಾ। ಜಿ. ವಿ. ಶ್ರೀರಾಮರೆಡ್ಡಿಯವರು ಮಾತನಾಡಿ ಈ ವಿಭಾಗದಲ್ಲಿ ರೈತ ಸಂಘಟನೆಯ ಅವಶ್ಯಕತೆಗಳನ್ನು ವಿವರಿಸಿದರು. ನಂತರ ಸುಮಾರು 30 ಜನ ರೈತರ ಒಂದು ಸಮಿತಿಯು ಹಳ್ಳಿಹಳ್ಳಿಗಳಿಗೂ ಹೋಗಿ ಸದಸ್ಯತ್ವವನ್ನು ನೊಂದಾಯಿಸಲು ತೀರ್ಮಾನಿಸಿತು.

ದಿನಾಂಕ 8-5-83 ರಂದು ಸೋಮೇನಹಳ್ಳಿಯಲ್ಲಿ ರೈತರ ಸಭೆ ನಡೆದು 16 ಮಂದಿಯ ಒಂದು ಸಂಘಟನಾ ಸಮಿತಿಯನ್ನು ರಚಿಸಲಾಯ್ತು. ಈ ಸಭೆಗೆ ಸುತ್ತಮುತ್ತಲ ಹಳ್ಳಿಗಳಿಂದ ಸುಮಾರು 150 ಜನ ರೈತರು ಬಂದಿದ್ದು ಅವರುಗಳನ್ನುದ್ದೇಶಿಸಿ ಕಾ। ಜಿ. ವಿ. ಶ್ರೀರಾಮರೆಡ್ಡಿಯವರು ಮಾತನಾಡಿದರು.

ದಿನಾಂಕ 9-5-83 ರಂದು ಸೋಮೇಶ್ವರ ಪಂಚಾಯ್ತಿ ರೈತ ಸಂಘದ ಸಭೆಯು ಶ್ರೀ ಈಶ್ವರಪ್ಪನವರ ಅಧ್ಯಕ್ಷತೆಯಲ್ಲಿ ನಡೆಯಿತು. ಸಭೆಯನ್ನು ಉದ್ದೇಶಿಸಿ, ಕಾ। ರೆಡ್ಡಿಯವರು ಭಾಷಣ ಮಾಡಿದರು. ಈಗ ಈ ಪ್ರದೇಶಗಳಲ್ಲಿ ರೈತ ಸಂಘಕ್ಕೆ ಸದಸ್ಯರನ್ನು ಸೇರಿಸುವ ಕೆಲಸ ಚುರುಕಾಗಿ ನಡೆಯುತ್ತಿದೆಯೆಂಬುದಾಗಿ ಕಾ। ಶ್ರೀರಾಮರೆಡ್ಡಿಯವರು ವರದಿ ಮಾಡಿದ್ದಾರೆ.

ಆರ್. ಎಸ್. ಎಸ್. ಅತಿರೇಕ

ಸಿ. ಪಿ. ಎಂ. ಸಭೆಯ ಮೇಲೆ ಬಾಂಬ್ ಎಸೆತ

ಕನ್ಯಾಕುಮಾರಿ ಜಿಲ್ಲೆಯ ತಕ್ಕಲೈ ಎಂಬಲ್ಲಿ ಸಿ.ಪಿ.ಐ.(ಎಂ) ನಡೆಸುತ್ತಿದ್ದ 'ಮೇ ದಿನ'ದ ಸಭೆಯ ಮೇಲೆ ಆರ್. ಎಸ್. ಎಸ್.ನ ಗೂಂಡಾಗಳು ಬಾಂಬ್ ಎಸೆದಿದ್ದಾರೆ.

ಮೇ 3ರಂದು ತಕ್ಕಲೈನಲ್ಲಿ ನಡೆದ ಮೇ ದಿನದ ಸಭೆಯಲ್ಲಿ ಸಿ. ಪಿ. ಐ. (ಎಂ)ನ ಶಾಸಕರಾದ ಜೆ. ಹೇಮಚಂದ್ರನ್, ಟಿ. ಮಣಿ ಹಾಗೂ ಕೇರಳ ರಾಜ್ಯ ಸಿ. ಐ. ಟಿ. ಯು. ಕಾರ್ಯದರ್ಶಿ ಪದ್ಮಲೋಚನನ್, ಪಾರ್ಲಿಮೆಂಟ್ ಸದಸ್ಯರೂ, ಕೇರಳದ ಮಾಜಿ ಮಂತ್ರಿಗಳೂ ಆದ ಕಾ। ಇಂಬಿಚ್ಚಿ ಬಾವಾ ಮುಂತಾದವರು ಭಾಗವಹಿಸಿದ್ದರು. ನಂತರ ಸಾಂಸ್ಕೃತಿಕ ಕಾರ್ಯಕ್ರಮ ನಡೆಯಿತು.

ರಾತ್ರಿ 12-30ರ ಸಮಯದಲ್ಲಿ ಸಾಂಸ್ಕೃತಿಕ ಕಾರ್ಯಕ್ರಮ ನಡೆಯುತ್ತಿದ್ದಾಗ ಪಕ್ಕದ ತಾಲ್ಲೂಕ್ ಆಫೀಸ್ ಕಾಂಪೌಂಡಿನಿಂದ ಆರ್. ಎಸ್. ಎಸ್. ದುಷ್ಕರ್ಮಿಗಳು ಎಸೆದ ಬಾಂಬೊಂದು ಭಾರೀ ಶಬ್ದದೊಂದಿಗೆ ಸ್ಫೋಟಗೊಂಡಿತೆಂದೂ ದುಷ್ಕರ್ಮಿಗಳು ಓಡಿ ಹೋದರೆಂದೂ ತಿಳಿದು ಬಂದಿದೆ. ಸ್ಫೋಟದಿಂದ ಯಾರಿಗೂ ಅಪಾಯವುಂಟಾಗಿಲ್ಲ. ಈ ಕುರಿತು ಪೋಲೀಸರಿಗೆ ದೂರು ನೀಡಲಾಗಿದೆ. ರಸ್ತೆಯುದ್ಧಕ್ಕೂ ಕಟ್ಟಲಾಗಿದ್ದ ಸಿ.ಪಿ.ಐ.(ಎಂ)ನ ಬಾವುಟಗಳನ್ನು ಆರ್. ಎಸ್. ಎಸ್. ಗೂಂಡಾಗಳು ಕಿತ್ತೆಸೆದಿರುವುದಾಗಿ ವರದಿಯಾಗಿದೆ.

ಈ ಘಟನೆಯನ್ನು ಪಕ್ಷದ ಮುಖಂಡರುಗಳು ಖಂಡಿಸಿ ಕೂಡಲೇ ದುಷ್ಕರ್ಮಿಗಳನ್ನು ಬಂಧಿಸಬೇಕೆಂದು ಒತ್ತಾಯಿಸಿದ್ದಾರೆ.

ಬಿ. ಜೆ. ಪಿ.ಯ ಅಕ್ಕಿ ಗೇಟು

(ಒಂದನೇ ಪುಟದಿಂದ)

ವುದನ್ನೂ ತಡೆಗಟ್ಟಲೇಬೇಕು. ಈ ಕ್ರಮ ಕೈಗೊಳ್ಳದೆ ಅಕ್ಕಿ ಗೇಟಿನ ನಾಟಕ ಮಾಡಿದವರು ಅಕ್ಕಿ ಬೆಲೆ ಹೆಚ್ಚಿಸುವವರೇ. ಬಿ.ಜೆ.ಪಿ. ಯ ಈ ಕ್ರಮದಿಂದಾಗಿ ಜಾತಿ ದ್ವೇಷ ಬೆಳೆಯುವ ಸಂಭವವಿದೆ. ಆದ್ದರಿಂದ ಈ ನಾಟಕವನ್ನು ಕೂಡಲೇ ನಿಲ್ಲಿಸಬೇಕೆಂದು ಸಿ.ಪಿ.ಐ.(ಎಂ) ಕರೆಕೊಟ್ಟಾಗ, ಅಧಿಕಾರಿಗಳ ಮಧ್ಯ ಪ್ರವೇಶದಿಂದ ಈ ನಾಟಕಕ್ಕೆ ಪರದೆ ಎಳೆಯಲಾಯಿತು.

ಮನೆಯಲ್ಲಿ ಕಳವು ಮಾಡಿ ತಪ್ಪಿಸಿಕೊಳ್ಳುವ ಸಲುವಾಗಿ "ಕಳ್ಳ ಕಳ್ಳ ಹಿಡಿಯಿರಿ" ಎಂದು ಕೂಗುತ್ತ ಹೊರಗೆ ಓಡಿ ಹೋಗುವಂತೆ ಬಿ. ಜೆ. ಪಿ. ಮತ್ತು ವ್ಯಾಪಾರಸ್ಥರು ಅಕ್ಕಿ ಗೇಟಿನ ನಾಟಕ ಹೂಡಿರುತ್ತಾರೆ.

ಬೆಲೆ ಕಡಿಮೆಯಾಗಬೇಕಾದರೆ, ಸರ್ಕಾರವೇ ನೇರವಾಗಿ ರೈತರಿಂದ ಅಕ್ಕಿ ಖರೀದಿ ಮಾಡಬೇಕು. ಖರೀದಿ ವಿತರಣೆಗಳನ್ನು ರಾಷ್ಟ್ರೀಕರಣ ಮಾಡಿ, ಅಗ್ಗ ದರದ ಅಂಗಡಿಗಳ ಮೂಲಕ ಅದರ ವಿತರಣೆಯಾಗಬೇಕೆಂದು ಮಾರ್ಕ್ಸ್‌ವಾದಿ ಕಮ್ಯೂನಿಸ್ಟ್ ಪಾರ್ಟಿ ಹೇಳುತ್ತ ಬಂದಿದೆ. ಖರೀದಿ ವಿತರಣೆಯ ರಾಷ್ಟ್ರೀಕರಣವನ್ನು ಬಿ. ಜೆ. ಪಿ. ವಿರೋಧಿಸುತ್ತದೆ. ಆದ್ದರಿಂದ ಬಿ. ಜೆ. ಪಿ.ಯವರ ಅಕ್ಕಿ ಗೇಟಿನ ನಾಟಕದ ನಿಜ ಅರ್ಥ ಏನೆಂಬುದನ್ನು ಜನರೇ ತಿಳಿದುಕೊಳ್ಳಲಿ.

ಅಸಮರ್ಪಕ ಪರಿಹಾರ ಕಾರ್ಯ

(ಒಂದನೇ ಪುಟದಿಂದ)

ಯಲ್ಲೇ ರಾಜ್ಯ ಸರ್ಕಾರದ ಕರ್ತವ್ಯ ಕೂಡ ಇದೆಯೆಂಬುದನ್ನು ಮರೆಯಬಾರದು. ಹಣ ಎಲ್ಲಿಂದಾದರೂ ಒದಗಿಸುವ ಪ್ರಯತ್ನ ಮಾಡುವುದು ಬೇರೆ. ಕಾಯಂ ಪರಿಹಾರೋಪಾಯ ಕಂಡುಹಿಡಿದು, ಅದನ್ನು ಕಾರ್ಯರೂಪದಲ್ಲಿ ತರಲು ಕಾರ್ಯಕ್ರಮ ಹಾಕಿಕೊಳ್ಳುವುದು ಬೇರೆ. ಇಷ್ಟು ವರ್ಷ ಕೇಂದ್ರ-ರಾಜ್ಯ ಸರ್ಕಾರಗಳು ಹರಿದ ಚಿಂದಿ ಬಟ್ಟೆಗೆ ತಾತ್ಪೂರ್ತಿಕ ಹೊಲಿಗೆ ಹಾಕುವ ನೀತಿಯನ್ನೇ ಅನುಸರಿಸುತ್ತ ಬಂದಿದ್ದಾರಲ್ಲದೆ, ಕಾಯಂ ಸ್ವರೂಪದ ಪರಿಹಾರ ಕಂಡು ಹಿಡಿಯುವ ಶ್ರಮ ವಹಿಸಲಿಲ್ಲ. ಈಗಲಾದರೂ ರಾಮಕೃಷ್ಣ ಹೆಗ್ಡೆ ಸರ್ಕಾರ ತಜ್ಞರ, ರಾಜಕೀಯ ಪಕ್ಷಗಳ ರೈತ ಸಂಘಗಳ ಸಲಹೆ ಪಡೆದು ನಿರ್ದಿಷ್ಟ ಕಾರ್ಯಕ್ರಮವನ್ನು ನಿರೂಪಿಸುವುದು ಅತ್ಯಗತ್ಯ.

ರಾಜ್ಯದಲ್ಲಿಯ 26000 ಹಳ್ಳಿಗಳಿಗೆ ನೀರು ಒದಗಿಸಲು ರೂ. 100 ಕೋಟಿಯ ಯೋಜನೆ ತಯಾರಿಸಲಾಗಿದೆಯೆಂದು ಪಂಚಾಯಿತಿ ಮಂತ್ರಿಯವರು ಸಾರಿದ್ದಾರೆ. ತಾತ್ಪೂರ್ತಿಕ ಅಥವಾ ಕಾಯಂ ಯೋಜನೆಗಳನ್ನು ನಿರ್ಧರಿಸುವಾಗ, ಕಾರ್ಯರೂಪದಲ್ಲಿ ತರುವಾಗ, ರಾಜ್ಯ ಸರ್ಕಾರದ ವಿರೋಧಿ ಪಕ್ಷಗಳನ್ನೂ ಸಾಮೂಹಿಕ ಸಂಘಟನೆಗಳನ್ನೂ ವಿಶ್ವಾಸಕ್ಕೆ ತೆಗೆದುಕೊಳ್ಳದಿದ್ದರೆ, ಅಪಪ್ರಚಾರಕ್ಕೆ ಅವಕಾಶ ಮಾಡಿಕೊಡುತ್ತದೆ. ಆದ್ದರಿಂದ ಸರ್ಕಾರ ಹಣ ಒದಗಿಸಿದರೂ ಕೂಡ ಜಿಲ್ಲಾಧಿಕಾರಿಗಳು ಸಕಾಲದಲ್ಲಿ ಪ್ರಾಶಸ್ತ್ಯದ ತಳಹದಿಯಲ್ಲಿ ಪರಿಹಾರ ಕಾರ್ಯ ಕೈಗೊಳ್ಳುತ್ತಿಲ್ಲವೆಂಬ ದೂರುಗಳು ಬರುತ್ತಿದೆ. ಇವುಗಳನ್ನೆಲ್ಲ ಪರಿಹರಿಸಬೇಕು. ಸಾಮೂಹಿಕ ಸಂಘಟನೆ ಜನತೆಯನ್ನೂ ವಿಶ್ವಾಸದಲ್ಲಿ ತೆಗೆದುಕೊಂಡರೆ ಮಾತ್ರ ಪರಿಹಾರ ಕಾರ್ಯಗಳನ್ನು ಫಲಕಾರಿಯಾಗಿ ನಿರ್ವಹಿಸಲು ಸಾಧ್ಯ. ಇದರ ಜೊತೆಯಲ್ಲೇ ನಿಷ್ಠಾವಂತ ನೌಕರಶಾಹಿ ವರ್ಗದ ಸಹಾಯ-ಸಹಕಾರ ಅತ್ಯಗತ್ಯ.

ಆದ್ದರಿಂದ ಹೆಗ್ಡೆ ಸರ್ಕಾರದ ನಡವಳಿಕೆ, ನಿರೂಪಣೆಗಳಲ್ಲಿ ಬದಲಾವಣೆಗಳಾಗಬೇಕು. ಹೊಸ ನೀತಿಯನ್ನು ಧೋರಣೆಯನ್ನು ಧೈರ್ಯದಿಂದ ಕಾರ್ಯರೂಪದಲ್ಲಿ ತರುವ ದೃಢ ನಿಲುವು ಬೇಕು. ಹಾಗಾದರೆ ಮಾತ್ರ ಸರ್ಕಾರ ಬದಲಾಗಿದೆಯೆಂದು ಜನರಿಗೆ ಅರಿವಾಗಲು ಸಾಧ್ಯ.

Printed & Published by P. Ramachandra Rao by him on behalf of the Communist Party of India (Marxist) Karnataka State Committee L-56 K. V. Temple Street Sultanpet, Bangalore 560053. Editorial and managerial office : L-56, K. V. Temple Street, Sultanpet, B-53. Phone : 24154
Printed at Karnataka Pressmen Associates (P) Limited, 54/1, K. R. Road, Bangalore-4 Editor: P. RAMACHANDRA RAO